A nobleman was very jealous of his wife. He had no reason to doubt of her love and fidelity. When his wife had their first child, he refused to recognize the baby as his own. He was more than sure that the child was the fruit of his wife's infidelity. No matter how much the woman tried to assure him that she had not been with another man, he continued to reject his infant son. In her desperation, the wife and mother came to St. Antony for help. The Saint talked to the nobleman for hours, and finally succeeded in making him see the absurdity behind his jealousy. Just then a nurse brought in the infant. Instantly, his old state of mind returned. At this point Antony turned to the child and said, "In the name of Jesus Christ, speak and tell who your father is!" The infant pointed to the

nobleman and, in a voice of a child years older, he said, "There is my father!" With that the father broke down in tears and took the child in his arms. This is how Antony saved a family and a marriage from the pitfalls of gossip and slander.

**12. The Liberation of Padua**

A few years after St. Antony's death, Ezzelino extended his dominion by brute force to all of the main cities in the Veneto Region: Verona, Vicenza, Treviso, Feltre, Belluno and Padua. In 1254, four years after the death of Emperor Frederick II, Ezzelino was excommunicated by Pope Innocent IV, who also launched a crusade against him. Padua was therefore besieged by the Pope's forces, which wanted to free the city of Ezzelino's tyranny. The Blessed Luke asked for St. Antony's help so that the pope's army may be successful. Naturally, it's not only Blessed Luke who was praying, but with him were praying the citizens of Padua who were still in bondage within the city's walls. St. Antony appeared to two Franciscan friars (one of them is probably the Blessed Luke Belludi) and foretold them about the imminent liberation of Padua from Ezzelino's tyranny. This is what actually occurred in 1256 when Ezzelino's troops were driven out from

Padua. The citizens of the city were finally free; their prayers had been answered through the intercession of St. Antony.

## 13. The Saint of Miracles

As we know Antony died in 1231 and was buried for the time being in a little church dedicated to the Virgin Mary Mater Domini, Mother of God, while waiting for the Basilica to be at least partially completed so that the body could be kept in a much worthier tomb. His funeral took place on the following Tuesday. On the day of the funeral, a woman came whose name deserves to be remembered. She was called Cunizza and had been ill for a year. A great tumour had formed on her shoulder and she was only able to walk by hobbling along with the aid of crutches. Coming to the tomb, where Antony had just been buried in, she prostrated herself in prayer. A little while later she realised that the swelling had disappeared, leaving her skin smooth and clear. She threw aside her crutches and stood upright with tears of joy and she went home giving thanks to God and her dear friend St Antony.

## 4. The Miracle of Tongues

Endowed with great natural gifts, enjoying excellent health, a powerful voice, combined with great eloquence, an admirable delivery, a perfect knowledge of the Scriptures and theology, he was, soon after his ordination, sent to preach in France, Italy and Portugal.

Although in his youth he had never spoken anything but Portuguese, he, like the apostles after Pentecost, received that wonderful gift of tongues, which not only enabled him to preach even with eloquence in French and Italian, but to make himself under stood by people from all parts of the world.

An instance of this may be given:

When ordered by the Holy See to preach the Lenten sermons at Rome, he was perfectly understood by the immense multitude from all nations, whom the renown of his great sanctity and marvellous gifts had attracted.

This same gift was of most frequent occurrence during his missionary career.

## 5. Why St. Antony is invoked for Lost and Mislaid Things?

The following incident in the life of St. Antony accounts for his being invoked for lost and mislaid articles:

During his stay at the Franciscan monastery at Montpellier, St. Antony was not only engaged in preaching, but also in teaching theology to his younger brethren. The latter, weary of the monastic life, suddenly left the monastery, taking with him a book of psalms, copied and annotated by the saint for the benefit of his pupils. The loss of this book was deeply felt by St. Antony, as books at that time were only written, the art of printing being unknown- an ordinary book costing at least a hundred dollars of our money. In the year 1240, the monks at Camaldoli paid as much as two hundred gold ducats for an illuminated missal. Whole fortunes sometimes were spent in the purchase of a single book.

What pained the saint even more than the loss of a work invaluable to him, was the outrage committed against God and the spiritual danger threatening the culprit. The saint, with his usual trust in God, at once betook himself to prayer,

humbly imploring the divine mercy on the unhappy youth and at the same time asking for the restitution of his book. His prayer was barely finished before it was heard. Just at that moment, as the thief was about to cross a bridge, the devil, in the shape of a hideous Negro, appeared before him with an axe in his hand, threatening at once to kill him and trample him under foot if he did not immediately retrace his steps. The novice, terrified at the sight of the monster, hastened to obey and falling at the feet of the servant of God, not only gave back the book, but implored forgiveness, begging to be readmitted into the monastery. The saint, full of gratitude to God, readily forgave the culprit, warning him at the same time against the snares of the devil and encouraging him to persevere in his holy vocation.

The stolen book has been for years preserved in the Franciscan monastery at Bologna.

**6. The Apparition of the Holy Child.**

The Friars Minor had no monastery within the walls of Padua, the nearest one at Arcella, outside the city, being about three-quarters of an hour's walk. It often happened that, owing to the gates being closed early in the evening, it was

impossible for the saint on account of his missionary work to return home. But he easily found a night's shelter among his friends. Tito Borghese, Count of Campo San Pietro, one of the saint's dearest friends, was among the few whom he honoured the most with his presence. This noble man had so great a veneration for him that he carefully noted down all that took place during his visits, even rising up at night to watch his guest through the keyhole. Once, when thus visiting him, he noticed an extra ordinary light piercing through the chinks of the saint's apartments. Anxious to discover the cause of this, he drew near and to his great surprise saw through the cracks of the door St. Antony holding a beautiful child in his arms, whom he was lovingly caressing. His host was first at a loss to understand how this lovely infant had entered the apartment of his guest, but soon discovered through his majestic bearing and the rapture of St. Antony, that the child was no other than our divine Lord, who, under this form had come to console, encourage and strengthen His faithful servant. The apparition lasted some time, then suddenly disappeared, leaving the room in total darkness. At once the saint rose from his prayers, and on going to his bedroom, knocked against his host in the dark.

## 7. Bilocation of the Saint

Another wonderful miracle has been handed down to posterity. Whilst preaching on Easter Sunday in the cathedral at Montpellier the saint suddenly remembered he had to sing the Alleluia at the convent Mass. He paused for an instant and was silent, as if trying to get breath. But in reality he was singing the Alleluia in his own monastery, after which he resumed his sermon. Such occurrences naturally caused St. Antony to be held in great veneration by everybody.

# 8. NOVENA

If you ask for miracles,
Death, error, all calamities,
The leprous stain and demons fly,
And health succeeds infirmities

**R:** The Sea obeys and Fetters break,
And lifeless limbs thou dost restore.
Whilst treasures lost are found again,
When young and old thine aid implore

All dangers vanish at thy prayer,
And direst need doth quickly flee,

Let those who knew thy power proclaim,
Let Paduans say-These are of these. The sea obeys….

## AN EFFICACIOUS PRAYER

O white lily of purity, sublime example of poverty, true mirror of humility, resplendent star of sanctity, O glorious St Antony, who didst arms the infant Jesus; I beseech thee to take me under thy powerful protection. Thou in whom the power of working miracles shines forth among the other gifts of God, have pity upon me and come to my aid in this my great need………… (Remember your intentions) Cleanse my heart from every disorderly affection. Obtain for me a true contrition for my sins and great love of God and of my neighbour that serving my God faithfully in this life I may enjoy and bless him eternally with thee in paradise. Amen.

**REMEMBER** O great St Antony that by thy intercession, death, error, all calamities, the demon and infectious diseases fly away. Through thee, the sick are cured, the sea is calmed, prisoners are loosened from their fetters, cripples obtain the use of their limbs and lost goods are recovered. All who invoke thee are heard. Every threatening danger vanishes at thy prayer. Full of confidence therefore,

I come to thee, O great Wonder-worker; show thy power, by granting me the favour I now ask of thee. Amen.

**Let us pray:** O God, may the votive commemoration of Blessed Antony, Thy confessor, give joy to Thy Church, that it may be ever defended by spiritual aid and deserve to enjoy eternal happiness. Through Christ our Lord. Amen.

## 9. THE LITANY OF ST ANTONY

Lord, have mercy on us.
Christ have mercy on us.
Lord have mercy on us.
Christ hear us.
Christ graciously hear us.

God the Father of Heaven
God the Son, Redeemer of the world
God the Holy Spirit
Holy Trinity one God
**Have mercy on us.**

Holy Mary,
Holy Mother of God,
Holy Virgin of virgins,
St Antony of Padua,
St Antony, man of apostolic zeal,
St Antony, filled with the spirit of the prophets,

St Antony Sublime doctor,
St Antony, Light of the Holy church,
St Antony, Preacher of grace,
St Antony, Trumpet of the Evangelical Law,
St Antony, Mirror of the regular discipline,
St Antony, Prodigy of austerity,
St Antony, Model of penitence,
St Antony, Example of obedience,
St Antony, illustrious Lover of poverty,
St Antony, Lily of chastity,
St Antony, Rose of patience,
St Antony, Violet of humility,
St Antony, Pearl of holiness,
St Antony, Hammer of heretics,
St Antony, fervent advocate of divine worship,
St Antony, burning with an ardent thirst
for salvation of souls,
St Antony, consumed with
a desire for martyrdom,
St Antony, Lover and constant
follower of Jesus,
St Antony, most devout client of the
Mother of God,
St Antony, Holy emulator of the
Seraphic Francis,
St Antony, celebrated among
all wonder-workers,

**Pray for us**

St Antony, Faithful protector of those
who trust in thee,
St Antony, Recoverer of objects lost,
St Antony, provider for the poor,

**Lamb of God, who takes away the sins of the world** – spare us O Lord.
**Lamb of God, who takes away the sins of the world** – graciously hear us O Lord.
**Lamb of God, who takes away the sins of the world** – have mercy on us.

**(V) Pray for us, O blessed Antony.**

(R) That we may be made worthy of the promises of Christ.

**Let us pray**

Almighty God, may Thy Glorious confessor St Antony whom thou hast enriched with virtues and the gift of miracles, intercede for us. Amen.

## 10. PRAYER TO OBTAIN GRACE OR RECOVER A LOST OBJECT

O great St Antony apostle full of goodness, who has received from God the gift of working miracles *(of restoring lost objects),* assist me at this moment so that by thy help, I may obtain the favour I ask *(recovery of the object I have lost)* and that thus glorify more and more the Lord who operates by thee such great marvels. Amen.

## 11. PRAYER FOR THE SICK

**Prayer in time of personal illness**

St Antony lover of the least and lowly, you reached out to the sick with a generous and compassionate heart. Please be with me at this time of ill health and accompany me as I face this sickness and all the uncertainties of infirmity. Help me experience God's healing power through your prayers, as well as my own. If I suffer, lead me to unite myself to the Cross of Jesus Christ, so that this suffering can bring spiritual benefit to me and to others. May my bearing the cross of illness here on earth prepare me for new life in the eternal joys of perfect happiness and fullness of life with God forever in Heaven. Amen.

### Prayer for a sick relative or friend

St Antony you always helped those in need. I fervently seek your heavenly intercession now for (here name) who is ill and in need of your miraculous assistance. Give strength to (name) so that he/she may experience God's blessings and goodness at this time. May his/her sufferings be lessened and confidence in God's Divine Providence be increased.

St. Antony, you were a true friend to the sick and offered them your compassionate care in powerful acts of healing. Stay near to (name) now with your protection. Console our anxious hearts and grant that our physical and emotional sufferings be a source of purification and growth for eternal life. Amen.

## 12. ST ANTONY'S ROSARY

It is composed of 39 beads. On each bead say one Our Father, Hail Mary and Glory be preceded by one of the following invocations.

**1. Death-** O blessed Antony, at whose word the dead arose, pray for the agonising and the faithful departed.

**2. Error-** O blessed Antony, preserve us from all error and pray for the church.

**3. Calamities-** O blessed Antony, preserve us from the calamities we deserve for our sins.

**4. Leprous stain-** O blessed Antony, guard our souls from all impurity and our bodies from infirmity.

**5. Demons fly-** O blessed Antony, terror of the demons, preserve us from the snares of the devil.

**6. Health succeeds infirmities-** O blessed Antony, cure by the intercession the sick and suffering in soul and body.

**7. The Sea obeys-** O blessed Antony, watch over all travellers, bring them safely to their destination and deliver us from the storms of our passions.

**8. Fetters break-** O blessed Antony, pray for all in prison and deliver us from the captivity of sin.

**9. Lifeless limbs thou dost restore –** O blessed Antony, preserve us from all accidents and mutilation that we serve God with sound bodies and souls.

**10. Treasures lost are found again-** O blessed Antony, restorer of things lost, restore to us all that we may have lost spiritually and temporarily.

**11. All dangers vanish at thy prayer-** O blessed Antony, protect us in all perils of soul and body.

**12. Direst need doth quickly flee-** O blessed Antony, lover of poor, help us in our needs and obtain work and bread for all in want.

**13. Let those know thy power proclaim-** O blessed Antony, we thank God for all the favours restored on thee and beseech theirs protection in life and death.

## 13. Thirteen Salutations in Honour of St. Antony

*(After each salutation say one our Father, Hail Mary and Glory be. . .)*

1. O Glorious St. Antony's you who were born under the protection of Mary and who consecrated to her from the age of five Lily of your virginity , you who put the demon to flight by the sign of the cross, obtain for us a tender devotion to our Blessed Mother and the strength to triumph over all the attacks of our internal enemy. O Glorious Saint, you who to escape from the dangers and temptations of the world, disdaining greatness, riches and comforts, entered the institute of the Canons Regular of St. Augustine, obtain for us a true contempt for the world.

2. O Glorious Saint, you who burning with the desire to suffer martyrdom entered the order of the Seraphic St. Francis obtain for us the spirit of penitence and mortification.

3. O Glorious Saint, you who guided by sentiments of the most profound humility, did all in your power to hide yourself from the eyes of the world when God suddenly showed you forth as an ark of science and of sanctity obtain for us the grace of practicing that virtue.

4. O Glorious Saint, you who chosen by God to preach His word received from Him the gift of tongues and the power of working the most wonderful miracles, obtain for us the grace to listen willingly and with fruit of the Divine Word.

5. O Glorious Saint, you who by your ardent love of God merited to receive in your arms the divine Infant Jesus, obtain for us the grace of receiving Him in the blessed Eucharist with love and fervor.

6. O Glorious Saint, you who to confound the heretics, proved to them the real presence of Jesus Christ in the Blessed Eucharist by making a dumb beast kneel down and adore it, obtain for us the grace of adoring Jesus with a lively faith in the Blessed Sacrament.

7. O Glorious Saint, you who on the refusal of men to come and hear the word of God, called the fishes of the sea together and preached to them, obtain for us the perfect submission of our minds and hearts to the Divine Truths.

8. O Glorious Saint, you who as protector of the innocent made a baby speak to save the honor of its mother, obtain for us the grace of being strong in the midst of the persecutions of the world and to preserve intact the purity of our souls.

9. O Glorious Saint, you who while preaching at Padua showed yourself at the same time at Lisbon by a marvelous miracle for the purpose of saving your father from calumny and death, obtain for us that we may pardon all injuries from the bottom of our hearts and love our enemies.

10. O Glorious Saint, you who by your prayers, your zeal and your heavenly wisdom, converted thousands of heretics and hardened sinners, obtain for us the grace of true conversion and that we may give ourselves entirely to God.

11. O Glorious Saint, you who in imitation of your Divine Redeemer spent all the salvation of souls, obtain for us the great your life for grace of seeing Jesus as you saw Him, when you breathed your

last sigh and of being saved with you in heaven for all eternity.

12. O Glorious Saint, you whom God has endowed with the power of unceasing miracles and who answer the prayers of those that invoke you, obtain for me from Jesus through Mary His Blessed Mother what I beg of you so ardently, if it is for the good of my soul. Amen.

## 14. TO OBTAIN A SPECIAL GRACE

**Request:**

Admirable Antony, so glorious for your miracles and for the favour that Jesus showed on you by coming in the guise of the Divine Child to rest in your arms, obtain from His goodness the grace I long for within my heart. You, so compassionate toward poor sinners, pay no attention to my defects, but to the glory of God which will once again be exalted by you and to my eternal salvation, not separated from the request I am now earnestly making.

(Say the grace that lies in your heart)

Let my love and charity towards the poor be a token of my gratitude. May I be given the grace

to enter heaven with them through your intercession by the grace of Jesus the Redeemer. Amen.

## 15. Thanksgiving after receiving favour

Glorious Wonder Worker, father of the poor, you who miraculously discovered the heart of a miser inside a gold coffer, the great gift of your heart always turned to the poor and downtrodden; you who offered to the Lord my pleas which, through your intercession, have always been answered, please accept as a token of my gratitude the offer which I place at your feet. Help those who are suffering like me; hasten to aid those who need support in their earthly and especially their spiritual needs, now and at the hour of our death. Amen.

# ಪರಿವಿಡಿ


1. ಸಂತ ಅಂತೋಣಿ ದೇವಾಲಯ, ಪಕಲ – ಇತಿಹಾಸ 64

2. ಸಂತ ಅಂತೋಣಿಯವರ ಜೀವನ 67

3. ಸಂತ ಅಂತೋಣಿಯವರಿಗೆ ನವೇನಾ ಪ್ರಾರ್ಥನೆ – 1 69

4. ಸಂತ ಅಂತೋಣಿಯವರಿಗೆ ನವೇನಾ ಪ್ರಾರ್ಥನೆ – 2 72

5. ಸಂತ ಅಂತೋಣಿಯವರ ಮನವಿ ಮಾಲೆ 75

6. ಸಂತ ಅಂತೋಣಿಯವರ ಸರಣಿ ಜಪ 77

7. ಸಂತ ಅಂತೋಣಿಯವರಿಗೆ ಹದಿಮೂರು ನಮನ ಸ್ತೋತ್ರಗಳು 79

8. ಸಂತ ಅಂತೋಣಿಯವರ ಪರಿಶುದ್ಧ ನಾಲಗೆಯ ಸ್ತುತಿ 82

9. ಕಳೆದುಹೋದ ವಸ್ತುಗಳನ್ನು ಮರಳಿ ಪಡೆಯಲು ವಿಶೇಷ ಪ್ರಾರ್ಥನೆ 83

10. ಸಂತ ಅಂತೋಣಿಯವರ ತೋಳ್ಬಂಧನದಲ್ಲಿರುವ ಬಾಲ ಯೇಸುವಿಗೆ ಪ್ರಾರ್ಥನೆ 83

# 1. ಸಂತ ಅಂತೋನಿ ದೇವಾಲಯ, ಪಕಲ – ಇತಿಹಾಸ

**ಸ್ಥಳ:**

ಪಡುಬಿದ್ರಿ–ಕಾರ್ಕಳ ರಾಜ್ಯ ಹೆದ್ದಾರಿಯ ಮುಖಾಂತರ ಬೆಳ್ಮಣ್ ಮಾರ್ಗವಾಗಿ ಮುಂದುವರಿಯುವಾಗ ರಸ್ತೆಯ ಎಡ ಬದಿಯಲ್ಲಿ ಬೃಹದಾಕಾರದ ಬಂಡೆಗಳು ನಮಗೆ ನೋಡಲು ಸಿಗುತ್ತವೆ. ಬಲ ಬದಿಯಲ್ಲಿ ಒಂದು ಪುಟ್ಟ ಪ್ರಾರ್ಥನಾ ಮಂದಿರ ಕಾಣ ಸಿಗುತ್ತವೆ. ಅದೇ ಪಕಲದ ಸಂತ ಅಂತೋನಿಯವರ ಪ್ರಾರ್ಥನಾ ಮಂದಿರ.

**ಇತಿಹಾಸ:**

ಪ್ರಾಚೀನ ಕಾಲದಲ್ಲಿ ಮೊಗವೀರರು ಒಣ ಮೀನುಗಳನ್ನು ಹೊತ್ತು ಕಾಲು ದಾರಿಯಲ್ಲಿ ಸಾಗಿ ಮನೆ ಮನೆಗೆ ಮಾರಲು ಹೋಗುವ ಸಂಪ್ರದಾಯವಿತ್ತು. ಹೀಗೆ ಮೀನು ಮಾರಿ ಹಿಂದಿರುಗುವಾಗ ಆ ಪರಿಸರದ ತರಕಾರಿ, ಅಕ್ಕಿ, ಕಟ್ಟಿಗೆ, ಭತ್ತ ಇತ್ಯಾದಿ ತೆಗೆದುಕೊಂಡು ತಮ್ಮ ಊರಿಗೆ ಹಿಂತಿರುಗುತ್ತಿದ್ದರು. ಹೀಗೆ ಪಕಲದ ಮಾರ್ಗದಲ್ಲಿ ಬಂದವರು ಅಲ್ಲಿಯ ರಾಯ್ ಡಿ'ಸಿಲ್ವ ಎಂಬವರ ಪೂರ್ವಜರ ಮನೆಯಲ್ಲಿ ತಂಗುವ ಸಂಪ್ರದಾಯವಿತ್ತು. ಹೀಗಿರುವಾಗ ಒಂದು ದಿನ ಈ ಘಟನೆ ನಡೆಯಿತು. ಮೊಗವೀರರು ಬೆಳಿಗ್ಗೆ ಎದ್ದು ಹಿಂತಿರುಗುವಾಗ ಅವರಿಗೆ ತಮ್ಮ ಬುಟ್ಟಿಯನ್ನು ಎತ್ತಲು ಆಗಲಿಲ್ಲ. ಆ ಬುಟ್ಟಿಯಲ್ಲಿ ಇದ್ದ ವಸ್ತುಗಳ ಭಾರ ಅಧಿಕವಾಗಿದೆ ಎಂದು ಅದರಲ್ಲಿ ಇದ್ದ ಒಂದು ಮರದ ತುಂಡನ್ನು ಹೊರಗಿಟ್ಟರು. ನಂತರ ಬುಟ್ಟಿ ಎತ್ತಲು ಪ್ರಯತ್ನಿಸುವಾಗ ಅವರಿಗೆ ಸಾಧ್ಯವಾಯಿತು. ಮನೆಯ ಯಜಮಾನರು ಆ ತುಂಡನ್ನು ಪರಿಶೀಲಿಸುವಾಗ, ಅದು ಒಂದು ಮಾನವ ರೂಪದ ಪ್ರತಿಮೆಯಾಗಿ ಗೋಚರಿಸಿತು ಹಾಗೂ ಅದು ಸಂತ ಅಂತೋನಿಯವರ ಪ್ರತಿಮೆ ಎಂದು ತಿಳಿದುಬಂತು. ಆ ಕುಟುಂಬದವರು ಅದನ್ನು ತಮ್ಮ ಮನೆಯಲ್ಲಿ ಪ್ರಮುಖ ಸ್ಥಳದಲ್ಲಿ ಪ್ರತಿಷ್ಠಾಪಿಸಿದರು. ಹೀಗೆ ಈ ಪರಿಸರದಲ್ಲಿ ಸಂತರ ಕೀರ್ತಿ ಪಸರಿಸಿತು. ಅನೇಕ ಜನರು ಜಾತಿ–ಭೇದ ಮರೆತು ತಮ್ಮ ಕಷ್ಟದ ಸಮಯದಲ್ಲಿ ಈ

ಸಂತರಿಗೆ ಹರಕೆ ಹಾಕುತ್ತಿದ್ದರು ಮತ್ತು ಉಪಕಾರ ಪಡೆಯುತ್ತಿದ್ದರು.

ಇಲ್ಲಿ ನಡೆದ ಇನ್ನೊಂದು ಘಟನೆ ಹೀಗಿದೆ. ಒಂದು ದಿನ, ಒಬ್ಬ ವ್ಯಕ್ತಿ ತನ್ನ ಎತ್ತಿನ ಗಾಡಿಯಲ್ಲಿ ಮರದ ಕಳ್ಳಸಾಗಣೆ ಮಾಡಿ ಸಂತ ಅಂತೋನಿಯವರ ಪ್ರಾರ್ಥನಾ ಮಂದಿರದ ಮುಂಭಾಗದಿಂದ ಸಾಗುತ್ತಿದ್ದಾಗ ಅದು ಅಲ್ಲಿ ಹೂತು ಹೋಯಿತು. ಮುಂದೆ ಸಾಗಲು ಕಷ್ಟವಾಯಿತು. ಆಗ ಆ ವ್ಯಕ್ತಿ ಪ್ರತಿಮೆಯ ಮುಂದೆ ಬಂದು, ಎಣ್ಣೆ ಸುರಿದು, ದೀಪವನ್ನು ಹೊತ್ತಿಸಿ ತನ್ನ ತಪ್ಪನ್ನು ಒಪ್ಪಿಕೊಂಡ ನಂತರವೇ ಪ್ರಯಾಣ ಮುಂದುವರಿಸಲು ಸಾಧ್ಯವಾಯಿತು. ಸಾರ್ವಜನಿಕರು ತಮ್ಮ ಸಾಕು ಪ್ರಾಣಿಗಳಿಗೆ ಮತ್ತು ಮಕ್ಕಳಿಗೆ ರೋಗ ರುಜಿನ ಬಂದಾಗ ಈ ಸಂತರ ಮುಖಾಂತರ ಬೇಡಿದ ಉಪಕಾರ ಸಿಗುತ್ತಿದ್ದರಿಂದ ಅವರು ಎಣ್ಣೆ ಸುರಿದು ದೀಪ ಹೊತ್ತಿಸಿ, ಮತ್ತು ಇತರ ವಸ್ತುಗಳನ್ನು ಅರ್ಪಿಸಿ ತಮ್ಮ ಕೃತಜ್ಞತಾ ಭಾವನೆಯನ್ನು ತೋರ್ಪಡಿಸುತ್ತಿದ್ದರು.

ಹೀಗೆ ವರ್ಷಗಳು ಕಳೆದ ಹಾಗೆ ಪ್ರತಿಮೆ ಪ್ರತಿಷ್ಠಾಪಿಸಿದ ಮನೆ ಹಳೆಯದಾಗಿ ಬಂತು. ಆ ಮನೆಯ ಯಜಮಾನರಾದ ಪಿಯಾದ್ ಡಿ'ಸಿಲ್ವರಲ್ಲಿ ಪರಿಸರದ ಹಿರಿಯರು ಚರ್ಚಿಸಿ ಈ ಪ್ರತಿಮೆ ಸಾರ್ವಜನಿಕವಾಗಿ ಪ್ರತಿಷ್ಠಾಪಿಸಲು ಅನುಮತಿಯನ್ನು ಕೋರಿದರು. ಅದಕ್ಕೆ ಅವರ ಕುಟುಂಬ ಸಂತೋಷದಿಂದ ಒಪ್ಪಿತು. ಆ ಕುಟುಂಬವನ್ನು ಸಂತ ವಿನ್ಸೆಂಟ್ ಪಾವ್ಲ್ ಸಭೆಯವರು ದತ್ತು ಸ್ವೀಕರಿಸಿ ಅಗತ್ಯವಾದ ನೆರವನ್ನು ನೀಡಿದರು. 1973 ರಲ್ಲಿ ಈ ಪ್ರತಿಮೆಯನ್ನು ಸಾರ್ವಜನಿಕವಾಗಿ ಪ್ರತಿಷ್ಠಾಪಿಸಲು ಒಂದು ಸಮಿತಿಯ ರಚನೆಯಾಯಿತು. ಜೋನ್ ಮಥಾಯಸ್, ರೆಮಿಡಿಯಾ ಡಿ'ಸೋಜ, ಅಲ್ಫೋನ್ಸಸ್ ಅಗೆರಾ, ದಿ. ಮಥಾಯಸ್ ಡಿ'ಸಿಲ್ವ, ದಿ. ಥೋಮಸ್ ಮಿನೆಜಸ್, ದಿ. ಬಾಜಿಲ್ ನ್ಹೊರೊನ್ಹಾ, ದಿ. ಫ್ರಾನ್ಸಿಸ್ ಡಿ'ಸಿಲ್ವ ಮತ್ತು ದಿ. ಜೋಸೆಫ್ ಡಿ'ಸಿಲ್ವ ಈ ಸಮಿತಿಯ ಸದಸ್ಯರಾಗಿದ್ದು, ಆಸು ಪಾಸಿನ ಮನೆಗಳಿಗೆ ಭೇಟಿ ನೀಡಿ ಅವರಿಂದ ಒಟ್ಟು ಮಾಡಿದ ದೇಣಿಗೆಯಿಂದ ಒಂದು ಪುಟ್ಟ ಪ್ರಾರ್ಥನಾ ಮಂದಿರವನ್ನು ನಿರ್ಮಿಸಿ,

ವಂ| ನಿಕೋಲಸ್ ಜೆ. ಪಿರೇರರವರು ಇದರ ಆಶೀರ್ವಚನಗೈದು, ಪ್ರತಿಮೆಯನ್ನು ಪ್ರತಿಷ್ಠಾಪಿಸಿದರು.

ಕಾಲಕ್ರಮೇಣ, ಸಂತ ಅಂತೋನಿಯವರ ಭಕ್ತಿ ಬೆಳೆದು ಅನೇಕ ಜನರು ಈ ಮಂದಿರಕ್ಕೆ ಭೇಟಿ ನೀಡಿ ಉಪಕಾರವನ್ನು ಪಡೆದುಕೊಳ್ಳುತ್ತಾರೆ. ಈ ಪರಿಸರದಲ್ಲಿ ಕ್ರೈಸ್ತೇತರ ಬಾಂಧವರು ಕೂಡ ತಮ್ಮ ಮನೆಯ ಯಾವುದೇ ಕಾರ್ಯಗಳನ್ನು ಆರಂಭಿಸುವ ಮೊದಲು ಈ ಪ್ರಾರ್ಥನಾ ಮಂದಿರಕ್ಕೆ ಭೇಟಿ ನೀಡಿ ಎಣ್ಣೆ ಸುರಿದು, ದೀಪವನ್ನು ಹೊತ್ತಿಸಿ ಪ್ರಾರ್ಥನೆ ಮಾಡುತ್ತಾರೆ. ಒಬ್ಬ ಕ್ರೈಸ್ತೇತರ ಬಾಂಧವರು ತಮ್ಮ ಅಂಗಡಿಯ ದೈನಂದಿನ ವ್ಯವಹಾರ ಪ್ರಾರಂಭಿಸುವ ಮೊದಲು ಈ ಮಂದಿರಕ್ಕೆ ಭೇಟಿ ನೀಡಿ ದೀಪ ಹೊತ್ತಿಸಿದ ನಂತರವೇ ಮುಂದುವರಿಯುತ್ತಾರೆ. ಪ್ರತಿದಿನ ಬೆಳಗ್ಗಿನಿಂದ ಸಂಜೆಯವರೆಗೆ ಇಲ್ಲಿ ದೀಪ ಹೊತ್ತಿರುವುದು ನಮಗೆ ಕಾಣಸಿಗುತ್ತದೆ. ಹೀಗೆ ಪಕಲದ ಸಂತ ಅಂತೋಣಿಯವರು 'ಪಕಲದ ದೇವರು' ಎಂದು ಈ ಪರಿಸರದಲ್ಲಿ ಪ್ರಖ್ಯಾತರಾಗಿದ್ದಾರೆ. ಈ ದಾರಿಯಲ್ಲಿ ಸಾಗಿ ಹೋಗುವ ಪ್ರಯಾಣಿಕರು ದೀಪ ಹೊತ್ತಿಸಿ ತಮ್ಮ ಪ್ರಯಾಣವನ್ನು ಮುಂದುವರಿಸುತ್ತಾರೆ.

ಜೂನ್ 10, 2018 ರಂದು ಇಟಲಿಯ ಪಾದುವಾದಿಂದ ತಂದ ಸಂತ ಅಂತೋನಿಯವರ ಪವಿತ್ರ ಅವಶೇಷ ಈ ಪ್ರಾರ್ಥನಾ ಮಂದಿರದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಜೂನ್ 13 ರಂದು ಸಂತ ಅಂತೋನಿಯವರ ಹಬ್ಬವನ್ನು ಮತ್ತು ಫೆಬ್ರವರಿ 15ರಂದು ಪವಿತ್ರ ಅವಶೇಷದ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅಲಂಕೃತ ತೇರಿನ ಮೆರವಣಿಗೆ ಮುಖಾಂತರ ಭಕ್ತಿಯನ್ನು ತೋರ್ಪಡಿಸಲಾಗುತ್ತದೆ. ಪ್ರತಿ ಮಂಗಳವಾರ ಇಲ್ಲಿ ನವೇನ ಮತ್ತು ಬಲಿಪೂಜೆ ಇದೆ. ತಿಂಗಳ ಪ್ರಥಮ ಮಂಗಳವಾರ ಪವಿತ್ರ ಪರಮ ಪ್ರಸಾದದ ಆರಾಧಾನೆ, ನವೇನ ಮತ್ತು ಬಲಿಪೂಜೆ ಇದೆ. ಅನೇಕ ಜನರು ಬಂದು ಆಧ್ಯಾತ್ಮಿಕ ಒಳಿತು ಮತ್ತು ಬೇಡಿದ ಉಪಕಾರವನ್ನು ಪಡೆದುಕೊಳ್ಳುತ್ತಾರೆ. ನಿಮಗೂ ಈ ಪುಣ್ಯಕ್ಷೇತ್ರಕ್ಕೆ ಆತ್ಮೀಯ ಸುಸ್ವಾಗತ.

## 2. ಸಂತ ಅಂತೋನಿಯವರ ಜೀವನ

ಪೋರ್ಚುಗಲ್ ದೇಶದಲ್ಲಿ ಹುಟ್ಟಿದ ಇವರ ಮೂಲ ಹೆಸರು ಫರ್ಡಿನಾಂಡ್ ಬ್ಯೂಲಾನ್. 1210ರಲ್ಲಿ ಅಗಸ್ಟೀನಿಯನ್ ಸಭೆ ಸೇರುತ್ತಾರೆ. 1220ರಲ್ಲಿ ಉತ್ತರ ಆಫ್ರಿಕಾದ ಮೊರಾಕೊದಲ್ಲಿ ಕ್ರೈಸ್ತ ಧರ್ಮಪ್ರಚಾರ ಮಾಡುತ್ತಾ ಹುತಾತ್ಮರಾದ, ಫ್ರಾನ್ಸಿಸ್ಕನ್ ಸಭೆಗೆ ಸೇರಿದ ಸಂತ ಬರ್ನಾಡ್, ಸಂತ ಪೀಟರ್, ಸಂತ ಒತ್ತೊ, ಸಂತ ಅಕುರ್ಸಿಯಸ್ ಮತ್ತು ಸಂತ ಅಡ್ಜುತುಸ್ – ಇವರ ರುಂಡವಿಲ್ಲದ ದೇಹವನ್ನು ಅಂತ್ಯಸಂಸ್ಕಾರ ಮಾಡುವುದಕ್ಕಾಗಿ ಕೊಂಡೊಯ್ಯುವಾಗ ಮಾರ್ಗಮಧ್ಯೆ ಅಂತೋನಿಯವರು ಇದ್ದ ಆಶ್ರಮಕ್ಕೆ ತರಲಾಗುತ್ತದೆ. ಇದನ್ನು ಕಂಡ ಅಂತೋನಿ ಅವರಂತೆ ಧರ್ಮಪ್ರಚಾರ ಮಾಡುತ್ತಾ ತಾನೂ ಹುತಾತ್ಮನಾಗಬೇಕೆಂಬ ಮಹಾದಾಸೆಯಿಂದ ತಮ್ಮ 26ನೇ ವಯಸ್ಸಿನಲ್ಲಿ, 1221 ರಲ್ಲಿ ಅಗಸ್ಟೀನಿಯನ್ ಸಭೆ ಬಿಟ್ಟು ಫ್ರಾನ್ಸಿಸ್ಕನ್ ಸಭೆ ಸೇರುತ್ತಾರೆ.

ಫ್ರಾನ್ಸಿಸ್ ಆಸ್ಸಿಸಿಯವರು ಸ್ಥಾಪಿಸಿದ್ದ ಫ್ರಾನ್ಸಿಸ್ಕನ್ ಸಭೆ ಸೇರಿ 'ಅಂತೋನಿ' ನಾಮಧೇಯ ಧರಿಸುತ್ತಾರೆ. ಅಂತೋನಿಯವರ ಅಭಿಲಾಷೆಯ ಮೇರೆಗೆ ಅವರನ್ನು, ಮೊರಾಕ್ಕೊ ನಗರಕ್ಕೆ ಕಳುಹಿಸಲಾಗುತ್ತದೆ. ಆದರೆ ಅಲ್ಲಿನ ಹವಮಾನಕ್ಕೆ ಒಗ್ಗಿಕೊಳ್ಳಲಾಗದೆ ಅನಾರೋಗ್ಯಕ್ಕೆ ತುತ್ತಾದ ಅಂತೋನಿ ಹಿಂತಿರುಗುವಾಗ ಚಂಡಮಾರುತ ಎದ್ದು ಅವರಿದ್ದ ಹಡಗು ಅನಿವಾರ್ಯವಾಗಿ ಸಿಸಿಲಿಗೆ ತಲುಪುತ್ತದೆ.

ಇದೇ ಸಂದರ್ಭದಲ್ಲಿ ಅಂದರೆ 1221ರಲ್ಲಿ ಸಿಸಿಲಿ ನಗರದಲ್ಲಿ ಫ್ರಾನ್ಸಿಸ್ಕನ್ ಸಭೆಯ 3000 ಸೋದರರು ವಾರ್ಷಿಕ ಸಮ್ಮೇಳನಕ್ಕೆ ಸೇರಿದ್ದರು. ಅದರಲ್ಲಿ ಭಾಗವಹಿಸಲು ಹೋದ ಸಂತ ಅಂತೋನಿ ತಮ್ಮ ಅಧ್ಯಯನ, ತಿಳುವಳಿಕೆಯ ಬಗ್ಗೆ ತೋರ್ಪಡಿಸಿಕೊಳ್ಳಲಿಲ್ಲ. ಅವರ ಅಧ್ಯಯನದ ಬಗ್ಗೆಯಾಗಲಿ, ಬೋಧನಾ ಚಾತುರ್ಯದ ಬಗ್ಗೆಯಾಗಲಿ ತಿಳಿಯದಿದ್ದ ಅಧಿಕಾರಿಗಳು ಅವರಿಗೆ ಯಾವುದೇ ಹೆಚ್ಚಿನ ಜವಾಬ್ದಾರಿ ವಹಿಸದೆ, ಫೋರ್ಲಿ ಮಠದಲ್ಲಿ ಅತಿಥಿ ಸತ್ಕಾರಕ್ಕೆ ಸಂಬಂಧಿಸಿದ ಸಣ್ಣಪುಟ್ಟ ಕೆಲಸ ಹಚ್ಚುತ್ತಾರೆ.

ಕೆಲವು ದಿನಗಳ ನಂತರ ಧರ್ಮಗುರುಗಳ ದೀಕ್ಷೆಯ ಸಂದರ್ಭವೊಂದರಲ್ಲಿ ಏನಾದರೂ ಮಾತನಾಡಲೇಬೇಕು ಎಂದು ಸಹಪಾಠಿಗಳು ಒತ್ತಾಯಿಸಿದಾಗ, ಅನಿವಾರ್ಯವಾಗಿ ಅವರು ಮಾತನಾಡುತ್ತಾರೆ. ಆಗ ಅಂತೋನಿಯವರ ಪ್ರಬೋಧನಾ ಪ್ರತಿಭೆ ಅನಾವರಣಗೊಳ್ಳುತ್ತದೆ. ಅಂತೋನಿಯವರು ಬೋಧನಾ ಶೈಲಿ ಎಷ್ಟು ಸರಳ ಹಾಗೂ ಮನಸ್ಸಿಗೆ ನಾಟುವಂತಿತ್ತೆಂದರೆ ಅನಕ್ಷರಸ್ಥರು, ಮುಗ್ಧರು ಕೂಡ ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು. ಪಾಷಂಡವಾದಿಗಳಿಗಂತೂ ಅಂತೋನಿಯವರ ಬೋಧನೆ ಸುತ್ತಿಗೆ ಏಟಿನಂತೆ ಬಾಯಿ ಮುಚ್ಚಿಸುತ್ತಿತ್ತು. ಆದ್ದರಿಂದಲೇ ಅವರನ್ನು 'ಪಾಷಂಡವಾದಿಗಳ ಸುತ್ತಿಗೆ' ಎಂದು ಕರೆಯುತ್ತಿದ್ದರು.

1231 ರ ಜೂನ್ 13 ರಂದು ಕೇವಲ 36 ವರ್ಷದ ಸಂತ ಅಂತೋನಿ ಕೊನೆಯುಸಿರೆಳೆದರು. 1946ರಲ್ಲಿ ಜಗದ್ಗುರು ಹನ್ನೆರಡನೇ ಭಕ್ತಿನಾಥರು ಅವರನ್ನು ಧರ್ಮಸಭೆಯ ಪಂಡಿತ ಎಂದು ಘೋಷಿಸಿದರು.

ಅಂತೋನಿಯವರು ಸತ್ತು 336 ವರ್ಷಗಳ ನಂತರ ಅವರ ಸಮಾಧಿ ತೆಗೆಯಲಾಯಿತು. ಇಡೀ ದೇಶ ನಾಶವಾಗಿದ್ದರೂ, ಅವರ ನಾಲಗೆ ಜೀವಂತ ನಾಲಿಗೆಯಂತೆ ನಾಶವಾಗದೆ ಇತ್ತು. 1263 ರಲ್ಲಿ ಅವರ ಸ್ಮರಣಾರ್ಥ ಲಿಸ್ಬನ್‌ನಲ್ಲಿ ಕಟ್ಟಲಾದ ಬಸಿಲಿಕಾದಲ್ಲಿ ಈ ದಿನದವರೆಗೂ ಆ ನಾಲಗೆಯನ್ನು ಸಂಪುಟದಲ್ಲಿ ಸಂರಕ್ಷಿಸಲಾಗಿದೆ.

ಪೋರ್ಚುಗಲ್‌ನ ಪಾಲಕ ಸಂತರಾದ ಸಂತ ಅಂತೋನಿಯವರು, ಪ್ರಯಾಣಿಸುವವರ, ಗರ್ಭಿಣಿ ಹಾಗೂ ಬಂಜೆ ಹೆಂಗಸರ ಪಾಲಕ ಸಂತರೂ ಆಗಿದ್ದಾರೆ. ಕಳೆದು ಹೋದ ವಸ್ತುಗಳನ್ನು ಹುಡುಕಿಕೊಡುವ ಸಂತರು ಎಂದೂ ಇವರು ಪ್ರಖ್ಯಾತರಾಗಿದ್ದಾರೆ.

## 3. ಸಂತ ಅಂತೋನಿಯವರಿಗೆ ನವೇನಾ ಪ್ರಾರ್ಥನೆ – 1

### ಸಂತ ಅಂತೋನಿಯವರ ಹಾಡುಗಳು

1. ಭಕ್ತರ ಪಾಲಕ ಸಂತ ಅಂತೋನಿ
ಈಶನ ಪ್ರಾರ್ಥಿಸಿ ನಮಗಾಗಿ
ಪಾದುವ ಊರಿನ ಹಿರಿ ಪುಷ್ಪವೇ
ಪವಾಡ ಪುರುಷರೇ ವರ ಪುತ್ರರೇ
ಪಾಪಿಷ್ಟರೆಲ್ಲರ್ಗೆ ಆಶ್ರಯವೇ
ಪಾವನ ಮೂರ್ತಿಯೇ ಪರಿಶುದ್ಧರೆ

ಸತ್ಯದ ದೀವೆಗೆ ತಾ ಪಿಡಿದು
ಸಕಲರಿಗೆ ಸುವಾರ್ತೆ ಸಾರಿದಿರಿ
ಸಾಯುವ ಪರಿಯಂತ ಓ ಸಂತರೇ
ದೇವರ ಪ್ರೀತಿಯ ಸಾರಿದಿರಿ

ದೀನರ ಸೇವೆಯ ತಾ ಗೈದಿರಿ
ನಿರ್ಭಾಗ್ಯ ಮನುಷ್ಯರ ಸಲಹಿದಿರಿ
ಈ ನಿಮ್ಮ ಭಕ್ತರ ಈಕ್ಷಿಸಿರಿ
ಎಮ್ಮಯ ಪ್ರಾರ್ಥನೆ ಆಲಿಸಿರಿ

ಓ ಸುಪ್ರಸಿದ್ಧ ಸಂತರೇ, ಸಂತ ಅಂತೋನಿಯವರೇ, ನಿಮ್ಮ ಪ್ರಾರ್ಥನೆಯಿಂದ, ಸಾವು, ನೋವು, ತಪ್ಪುಗಳು, ಅವಘಡಗಳು, ಪಿಶಾಚಿ ಮತ್ತು ಎಲ್ಲಾ ಕಾಯಿಲೆಗಳು ದೂರ ಸರಿಯುತ್ತವೆ ಎಂದು ನೆನೆಸಿರಿ. ನಿಮ್ಮಿಂದ ರೋಗಿಗಳಿಗೆ ಆರೋಗ್ಯ ದೊರಕುವುದು. ಸಮುದ್ರದ ಆರ್ಭಟವು ಕಡಿಮೆಯಾಗುವುದು. ಬಂದಿಖಾನೆಯಲ್ಲಿ ಬಂಧಿತರಾಗಿರುವ ಸರಪಳಿಗಳು ತುಂಡಾಗಿ ಬೀಳುತ್ತವೆ. ಕುಂಟರು ಎದ್ದು ಓಡುವರು. ದೃಷ್ಟಿಹೀನರು ನೋಡುವರು. ಕಿವಿ ಕೇಳಿಸದಿದ್ದವರಿಗೆ ಕೇಳಿಸುವುದು, ಮೂಕರು

ಮಾತನಾಡುವರು. ಕಳೆದುಹೋದ ವಸ್ತುಗಳು ಸಿಗುವುದು. ಚಿಕ್ಕವರು ದೊಡ್ಡವರು ನಿಮ್ಮ ಹತ್ತಿರ ಪ್ರಾರ್ಥಿಸುವರು, ಮತ್ತು ಏನೇನು ಬೇಡುತ್ತಾರೋ ಅದೆಲ್ಲಾ ಅವರಿಗೆ ಸಿಗುವುದು. ನಿಮ್ಮಿಂದ ಸಕಲ ಅಪಾಯಗಳು, ಗ್ರಹಚಾರಗಳು ದೂರ ಸರಿಯುತ್ತವೆ. ಮತ್ತು ನಮ್ಮ ಸಕಲ ಬೇಡಿಕೆಗಳನ್ನು ನಿವಾರಿಸುತ್ತೀರಿ. ಎಲ್ಲಾ ವಿಶ್ವಾಸವನ್ನು ನಿಮ್ಮ ಮೇಲಿಟ್ಟು ನಾವು ನಿಮ್ಮ ಸಹಾಯಕ್ಕಾಗಿ ಪ್ರಾರ್ಥಿಸುತ್ತೇವೆ. ಇಂತಹ ಮಹತ್ತರವಾದ ಆಸೆ ಆಕಾಂಕ್ಷೆಗಳಿಂದ ನಾವು ಬೇಡುತ್ತೇವೆ. ಅದನ್ನೆಲ್ಲಾ ನಮಗೆ ದಯಪಾಲಿಸಿ ನಿಮ್ಮ ಮಹಿಮಾಭರಿತ ಸಂತ ಪದವಿಯನ್ನು ಈ ಪ್ರಪಂಚಕ್ಕೆ ತೋರಿಸಿ. ಆಮೆನ್.

## ಅಪೇಕ್ಷಿತ ಫಲ ನೀಡುವಂತೆ ಸಂತ ಅಂತೋನಿಯವರಲ್ಲಿ ಪ್ರಾರ್ಥನೆ

ಪರಿಶುದ್ಧ ಲಿಲ್ಲಿ ಹೂವೇ, ಬಡತನದ ಉಚ್ಚ ದೃಷ್ಟಿಯೇ, ಸದ್ಗುಣಶಾಲಿಯ ನಿಜ ಆಸರೆಯೇ, ಪುನೀತ ಪ್ರಜ್ವಲಿಸುವ ನಕ್ಷತ್ರವೇ, ಆನಂದದಿಂದ ಕೂಡಿದ ಸಂತ ಅಂತೋನಿಯವರೇ, ದೇವ ಪುತ್ರರಿಗೆ ನಿಮ್ಮ ಕರಗಳಲ್ಲಿ ಹಿಡಿಯುವ ಭಾಗ್ಯ ದೊರಕಿತು. ನಿಮ್ಮ ಹತ್ತಿರ ಅತೀ ನಮ್ರತೆಯಿಂದ ಬೇಡುತ್ತೇನೆ, ನಿಮ್ಮ ಸಂತ ಪದವಿಯ ಆಧಾರದಿಂದ ನನ್ನನ್ನು ಸ್ವೀಕರಿಸಿ. ನಿಮಗೆ ದೇವರು ನೀಡಿದ ಸಕಲ ವರದಾನಗಳಲ್ಲಿ ಪವಾಡದ ವರದಾನವು ವಿಶೇಷವಾಗಿರುತ್ತದೆ. ನನ್ನ ಮೇಲೆ ಕರುಣೆ ಇಟ್ಟು ಮತ್ತು ನನ್ನ ಅತೀ ದೊಡ್ಡ ಬೇಡಿಕೆಯನ್ನು ಈಡೇರಿಸಲು ನನ್ನ ಹತ್ತಿರವಿರಿ. ಎಲ್ಲಾ ಅಕ್ರಮ ಪ್ರೀತಿಯನ್ನು ನನ್ನ ಹೃದಯದಿಂದ ದೂರ ಮಾಡಿರಿ. ನನ್ನ ಪಾಪಗಳಿಗೋಸ್ಕರ ಸರಿಯಾಗಿ ಪಶ್ಚಾತ್ತಾಪ ಮಾಡುವುದು, ದೇವರ ಹಾಗೂ ಇತರರ ಅತೀ ಹೆಚ್ಚಿನ ಪ್ರೀತಿಯನ್ನು ನನಗೆ ದಯಪಾಲಿಸಿರಿ. ಮತ್ತು ಹೀಗೆ ಈ ನನ್ನ ಜೀವದಲ್ಲಿ ವಿಶ್ವಾಸದಿಂದ ದೇವರ ಸೇವೆಯನ್ನು ನಾನು ಮಾಡಿ, ನಿಮ್ಮಿಂದ ನಿರಂತರ ಅವರಿಗೆ ಹೊಗಳುವುದಕ್ಕೆ, ಆನಂದಿಸಲು, ಸ್ವರ್ಗ ಸಾಮ್ರಾಜ್ಯಕ್ಕೆ ನನ್ನನ್ನು ತಲುಪಿಸಿರಿ. ಆಮೆನ್.

## ಸಂತ ಅಂತೋನಿಯವರಿಗೆ ಪ್ರಾರ್ಥನೆ

ಪವಾಡಪುರುಷ ಪಾದ್ವಾದ ಸಂತ ಅಂತೋನಿಯವರೇ, ನಿಮ್ಮ ಪವಾಡಗಳಿಂದ, ನಿಮ್ಮ ಸಹಾಯವನ್ನು ಕೋರಿ, ಪ್ರಾರ್ಥಿಸಿ, ಈ ಪುಣ್ಯ ಕ್ಷೇತ್ರಕ್ಕೆ ಭೇಟಿ ನೀಡಿದ ಎಲ್ಲಾ ಭಕ್ತವೃಂದದವರಿಗೆ ನೀವು ಆಶ್ರಯವಾಗುತ್ತೀರಿ. ಅವರ ಪ್ರಾರ್ಥನೆಗಳನ್ನು ಕೇಳುತ್ತೀರಿ. ಮತ್ತು ಅವರ ಕಷ್ಟಸಂಕೋಲೆಗಳನ್ನು ದೂರ ಮಾಡುತ್ತೀರಿ.

ಬೇರೆ ಬೇರೆ ಧರ್ಮದ, ಬೇರೆ ಬೇರೆ ಜಾತಿಯ ಜನರು ಬಂದು ನಿಮ್ಮ ಹತ್ತಿರ ಪ್ರಾರ್ಥಿಸುತ್ತಾರೆ. ಮತ್ತು ಅವರ ಕೋರಿಕೆಗಳನ್ನು ನೆರವೇರಿಸುತ್ತೀರಿ. ದೇವರು ನೀಡಿದ ಹಲವಾರು ಕೊಡುಗೆಗಳಲ್ಲಿ ಪವಾಡದ ಕೊಡುಗೆಯು ವಿಶೇಷವಾಗಿರುವುದು. ಈ ಪವಾಡದ ಶಕ್ತಿಯಿಂದ ನಮ್ಮ ಎಲ್ಲಾ ಆತ್ಮ ಶರೀರದ ಕೋರಿಕೆಗಳನ್ನು ನೆರವೇರಿಸಿರಿ ಎಂದು ನಮ್ರತೆಯಿಂದ ಪ್ರಾರ್ಥಿಸುತ್ತೇವೆ. (ಇಲ್ಲಿ ನಿಮ್ಮ ಕೋರಿಕೆಗಳನ್ನು ನೆನಪಿಸಿರಿ.) ಈ ಎಲ್ಲಾ ನಮ್ಮ ಕೋರಿಕೆಗಳನ್ನು ನಮ್ಮ ಪಿತ ದೇವರ ಪಾದಗಳ ಹತ್ತಿರ ಇರಿಸಿರಿ. ನಿಮ್ಮ ಪ್ರೀತಿಯ ಹಾಗೂ ನಮ್ರತೆಯ, ಮಾನವೀಯ ಮೇರೆಗೆ ದಯಾಮಯ ದೇವರು ಈ ಕೋರಿಕೆಗಳನ್ನು ಸ್ವೀಕಾರ ಮಾಡಲಿ. ಎಲ್ಲಾ ಕಷ್ಟಗಳಿಂದ, ವಿಘ್ನಗಳಿಂದ ರೋಗ ರುಜಿನಗಳಿಂದ ಮತ್ತು ಸಕಲ ಕೇಡುಗಳಿಂದ ನಮ್ಮನ್ನು ಅವರು ನಿವಾರಿಸಲಿ. ಹೀಗೆ ನಿಮ್ಮಿಂದ ದೊರಕಿದ ಸಕಲ ಸಹಕಾರ, ಉಪಕಾರಗಳ ಮೂಲಕ ಪಿತ ದೇವರಿಗೂ, ಅವರ ಪುತ್ರ ಕ್ರಿಸ್ತ ಯೇಸುವಿಗೂ ಮತ್ತು ಪವಿತ್ರಾತ್ಮರವರಿಗೂ ಮಹಿಮೆ ಉಂಟಾಗಲಿ. ಆಮೆನ್.

**ಯಾಜಕ :** ಕ್ರಿಸ್ತರ ವಾಗ್ದಾನಗಳಿಗೆ ನಾವು ಪಾತ್ರರಾಗುವಂತೆ.

ಭಕ್ತರು : ಸಂತ ಅಂತೋನಿಯವರೇ ನಮಗಾಗಿ ಪ್ರಾರ್ಥಿಸಿ.

**ಪ್ರಾರ್ಥಿಸೋಣ** : ಸರ್ವಶಕ್ತ ದೇವರೇ, ನೀವೊಬ್ಬರೇ ಪವಾಡಗಳನ್ನು ಮಾಡುತ್ತೀರಿ. ನಾವು ನಿಮ್ಮ ಹತ್ತಿರ ನಮ್ಮ ಹೃದಯದ ಅಂತರಾಳದಿಂದ

ಪ್ರಾರ್ಥಿಸುತ್ತೇವೆ. ನಿಮ್ಮ ಸೇವಕರಾದ ಸಂತ ಅಂತೋನಿಯವರ ನಾಲಿಗೆಯು ಮರಣದ ನಂತರ ಹೇಗೆ ಕೊಳೆಯದೇ ಉಳಿದುಕೊಂಡಿದೆ. ಹಾಗೆಯೇ ನಾವು ಅವರ ಪುಣ್ಯದಿಂದ ಮತ್ತು ಅವರ ಉಜ್ವಲ ಪ್ರಾರ್ಥನೆಯ ಮುಖಾಂತರ ದಿನ ನಿತ್ಯವೂ ನಿಮಗೆ ಕೃತಜ್ಞತೆ ನೀಡಲು, ನಿಮ್ಮನ್ನು ಹೊಗಳಲು, ಮತ್ತು ನಿಮ್ಮನ್ನು ವರ್ಣಿಸಲು ನಮಗೆ ದಯಪಾಲಿಸಿರಿ. ಆಮೆನ್.

## 4. ಸಂತ ಅಂತೋನಿಯವರಿಗೆ ನವೇನಾ ಪ್ರಾರ್ಥನೆ – 2

**ಗುರು :** ಸಂತ ಅಂತೋನಿಯವರೇ, ದೇವರ ಪೂಜ್ಯ ಸೇವಕರೇ, ನೀವು ಪವಾಡಪುರುಷರೆಂದು ಪ್ರಖ್ಯಾತಿ ಪಡೆದಿರುವಿರಿ. ನಿಮ್ಮ ನಿಷ್ಠಾವಂತ ಭಕ್ತರೆಲ್ಲರೂ ನಿಮ್ಮನ್ನು ಕೊಂಡಾಡುತ್ತಾರೆ. ನಿಮ್ಮ ಸನ್ನಿಧಿಗೆ ಬಂದಿರುವ ನಮ್ಮನ್ನು ಈಕ್ಷಿಸಿರಿ. ನಿಮ್ಮ ಪೂರ್ಣ ನಂಬಿಕೆಯನ್ನು, ಭರವಸೆಯನ್ನು ನಿಮ್ಮಲ್ಲಿ ಇರಿಸಿದ್ದೇವೆ. ನಮಗೆ ಅವಶ್ಯಕವಾಗಿರುವ ಕೃಪಾವರಗಳನ್ನು ಏಸುಕ್ರಿಸ್ತರಿಂದ ಪಡೆದುಕೊಂಡಿರೆಂದು ನಿಮ್ಮಲ್ಲಿ ಬೇಡಿಕೊಳ್ಳುತ್ತೇವೆ. ನಮ್ಮ ಈ ಕೋರಿಕೆಯನ್ನು ಎಂದಿಗೂ ತಿರಸ್ಕರಿಸದಿರಿ.

**ಎಲ್ಲರೂ :** ಕರುನಾಳು ಯೇಸುವೇ, ನಮ್ಮ ಆತ್ಮದ ಏಕೈಕ ಮತ್ತು ಸುಭದ್ರ ಆಸರೆ ನೀವೇ ಆಗಿರುವಿರಿ. ನಿಮ್ಮ ಸನ್ನಿಧಿಯಲ್ಲಿ ನಾವು ನಿಂತಿದ್ದೇವೆ. ಸಂತ ಅಂತೋನಿಯವರು ನಿಮ್ಮ ಮೇಲೆ ಇರಿಸಿದ ಅಪ್ರತಿಮ ಪ್ರೇಮದ ಫಲವಾಗಿ ನೀವು ಬಾಲಕ ರೂಪದಲ್ಲಿ ಅವರಿಗೆ ಪ್ರತ್ಯಕ್ಷರಾಗಿ ಅವರನ್ನು ಸಂತೈಸಿ ಹರಸಿದ್ದೀರಿ, ನೀವು ಅವರಿಗೆ ತೋರಿದ ಈ ಪ್ರೇಮದ ಪ್ರಯುಕ್ತ ನಾವು ಅವರ ಮುಖಾಂತರ ನಿಮ್ಮಲ್ಲಿ ನಮ್ಮ ಭರವಸೆಯನ್ನು ಇರಿಸಿದ್ದೇವೆ. ನಮ್ಮ ಎಲ್ಲಾ ಅವಶ್ಯಕತೆಯಲ್ಲೂ, ಆತಂಕದಲ್ಲೂ ನಮ್ಮ ಸಂರಕ್ಷಣೆಯನ್ನು, ನೆಮ್ಮದಿಯನ್ನು ದಯಪಾಲಿಸಿರಿ. ನಿಮ್ಮನ್ನು ನಾವು ನಂಬಿದ್ದೇವೆ. ನಿಮ್ಮಲ್ಲೇ ನಮ್ಮ ಭರವಸೆಯನ್ನು ಇಟ್ಟಿದ್ದೇವೆ.

**ಗುರು :** ಸಂತ ಅಂತೋನಿಯವರ ಮುಖಾಂತರ ಯೇಸು ಕ್ರಿಸ್ತರಿಗೆ ನಮ್ಮನ್ನೇ ಸಮರ್ಪಿಸೋಣ.

**ಎಲ್ಲರೂ :** ಸಂತ ಅಂತೋಣಿಯವರೇ, ಬಾಲಕ ಯೇಸುವನ್ನು ನಿಮ್ಮ ಕರಗಳಲ್ಲಿ ಪಡೆಯುವ ಅಪೂರ್ವ ಭಾಗ್ಯವನ್ನು ಗಳಿಸಿದ್ದೀರಿ. ನಿಮ್ಮ ಬಲಾಢ್ಯ ಆಶ್ರಯದಲ್ಲಿ ನಮ್ಮನ್ನು ಸ್ವೀಕರಿಸಿರೆಂದು ನಿಮ್ಮನ್ನು ನಾವಿಂದು ಪ್ರಾರ್ಥಿಸುತ್ತೇವೆ. ನಮಗೆ ಕರುಣೆ ತೋರಿ ನಮ್ಮ ಅತ್ಯಾವಶ್ಯಕತೆಯಲ್ಲಿ ನಮ್ಮ ಸಹಾಯಕ್ಕೆ ಧಾವಿಸಿರಿ. ನಮ್ಮ ಹೃದಯದಲ್ಲಿರುವ ಪಾಪಗಳನ್ನು ತೊಡೆದು ಹಾಕಿ ನಾವು ನಮ್ಮ ಪಾಪಗಳಿಗೆ ನಿಜವಾದ ಪಶ್ಚಾತಾಪಪಟ್ಟು ಸನ್ಮಾರ್ಗದಲ್ಲಿ ನಡೆಯಲು ಯೇಸುವಿನಲ್ಲಿ ಭಿನ್ನಹಿಸಿರಿ. ದೇವರಿಗಾಗಿ ಮತ್ತು ನೆರೆಹೊರೆಯವರಿಗಾಗಿ ಶ್ರೇಷ್ಟ ಪ್ರೇಮವು ನಮ್ಮಲ್ಲಿ ದೃಢವಾಗುವಂತೆ ಮಾಡಿರಿ. ಪ್ರತಿದಿನವು ದೇವರ ಸೇವೆಯನ್ನು ನಿಷ್ಟೆಯಿಂದ ಮಾಡುತ್ತಾ, ನಿಮ್ಮೊಂದಿಗೆ ಅವರನ್ನು ಸ್ತುತಿಸಿ ಆನಂದಿಸುವ ಸೌಭಾಗ್ಯವನ್ನು ಕರುಣಿಸಿರಿ, ಆಮೇನ್.

## ಪ್ರತ್ಯೇಕ ಉಪಕಾರಕ್ಕಾಗಿ ಪ್ರಾರ್ಥನೆ

ಓ ಸಂತ ಅಂತೋನಿಯವರೇ ಅಗಣಿತ ಅದ್ಭುತಗಳನ್ನು ನಡೆಸುವ ಪವಾಡಪುರುಷರೇ, ಬಡವರ ಮೇಲೆ ಹೆಚ್ಚು ಪ್ರೀತಿ ಉಳ್ಳವರೇ, ನಿಮ್ಮಲ್ಲಿಗೆ ಓಡಿ ಬರುವವರಿಗೆ ಉಪಕಾರಗಳನ್ನು ದಯಪಾಲಿಸಿ. ದಿವ್ಯ ಯೇಸುಬಾಲರನ್ನು ನಿಮ್ಮ ಕೈಯಲ್ಲಿ ಎತ್ತಿಕೊಳ್ಳಲು ಪಾತ್ರರಾದವರೇ, ನಮ್ಮ ಕಷ್ಟ ಕಾರ್ಪಣ್ಯಗಳನ್ನು ನೆರವಾಗಲು ನಿಮಗೆ ಆಸಕ್ತಿ ಇದೆಯೆಂದು ನಮ್ಮ ನಲ್ಮೆಯ ಕರ್ತರಾದ ಯೇಸುಕ್ರಿಸ್ತರ ಬಳಿ ನೀವು ನಮಗಾಗಿ ಪ್ರಾರ್ಥಿಸುವಿರೆಂದೂ ಪೂರ್ಣ ನಂಬಿಕೆಯಿದೆ. ನಾವೀಗ ನಿಮ್ಮಲ್ಲಿ ಬೇಡಿಕೊಳ್ಳುವ ಉಪಕಾರವನ್ನು ಕರುಣಿಸಿರಿ. (ಇಲ್ಲಿ ನಿಮ್ಮ ಕೋರಿಕೆಯನ್ನು ಮೌನವಾಗಿ ಬೇಡುವುದು)

## ವ್ಯಾಧಿಷ್ಟರಿಗಾಗಿ ಪ್ರಾರ್ಥನೆ

ಕರ್ತರೇ ಶರೀರದ ಬಲಹೀನತೆಯಿಂದ ಬೇನೆಪಡುವ ನಿಮ್ಮ ಸೇವಕರನ್ನು ಈಕ್ಷಿಸಿರಿ. ನೀವು ಸೃಷ್ಟಿಸಿದ ಆತ್ಮಗಳಿಗೆ ಉಪಶಮನವನ್ನು ನೀಡಿರಿ. ನಾವು ನಮ್ಮ ಕಷ್ಟ ಕಾರ್ಪಣ್ಯಗಳಿಂದ ವಿಮುಕ್ತರಾಗಿ ನಿಮಾ ಕರುಣೆಯಿಂದ ಶೀಘ್ರವಾಗಿ ಗುಣಹೊಂದಿ ಆರೋಗ್ಯಭಾಗ್ಯವನ್ನು ಕಾಣುವಂತಾಗಲಿ. ಹಲವಾರು ಕಾಯಿಲೆಗಳಿಂದ ಬಳಲುತ್ತಿರುವ ನಮ್ಮ ಸಹೋದರ, ಸಹೋದರಿಯರಿಗೆ ಪರಮವೈದ್ಯರಾದ ಸಂತ ಅಂತೋನಿಯವರೇ ಉತ್ತಮ ಆರೋಗ್ಯಭಾಗ್ಯವನ್ನು ಕರುಣಿಸಿರಿ. ನಮ್ಮ ಕರ್ತ ಯೇಸುಕ್ರಿಸ್ತರ ಮುಖಾಂತರ ನಿಮ್ಮನ್ನು ಪ್ರಾರ್ಥಿಸುತ್ತೇವೆ.

ಎಲ್ಲರೂ : ಆಮೇನ್

**ಗುರು :** ಕರ್ತರೆ ನಿಮ್ಮೊಡನೆಯಿರಲಿ

ಎಲ್ಲರೂ : ನಿಮ್ಮೊಡನೆಯೂ ಇರಲಿ.

**ಗುರು :** (ಬಲಗೈಯನ್ನು ಚಾಚಿ) ಕರ್ತರಾದ ಯೇಸುಕ್ರಿಸ್ತರೇ ನಿಮ್ಮನ್ನು ಪೋಷಿಸಲು ನಿಮ್ಮ ಮಧ್ಯದಲ್ಲೂ ನಿಮ್ಮನ್ನು ಕಾಪಾಡಲೂ, ನಿಮಗೆ ದಯೆ ತೋರಲೂ, ನಿಮ್ಮ ಮದ್ಯದಲ್ಲಿಯು ನಿಮಗೆ ಕಾವಲಾಗಿರಲು, ನಿಮ್ಮ ಹಿಂದೆಯೂ ನಿಮ್ಮನ್ನು ಆಶೀರ್ವದಿಸಲು, ನಿಮ್ಮ ಮೇಲೆಯೂ ಇರುವವರಾಗಲಿ; ಸರ್ವಶಕ್ತ ದೇವರಾದ ಪಿತ ಸುತ ಮತ್ತು ಪವಿತ್ರಾತ್ಮರ ಆಶೀರ್ವಾದವು ನಿಮ್ಮ ಮೇಲೆ ಇಳಿದು ಬಂದು ಸದಾ ನಿಮ್ಮಲ್ಲಿ ನೆಲೆಸಲಿ. ಆಮೇನ್

## 5. ಸಂತ ಅಂತೋನಿಯವರ ಮನವಿ ಮಾಲೆ

ಪ್ರಭು ದಯೆ ತೋರಿ । ಪ್ರಭು ದಯೆ ತೋರಿ
ಕ್ರಿಸ್ತರೆ ದಯೆ ತೋರಿ । ಕ್ರಿಸ್ತರೆ ದಯೆತೋರಿ
ಪ್ರಭು ದಯೆ ತೋರಿರಿ । ಪ್ರಭು ದಯೆ ತೋರಿ
ಕ್ರಿಸ್ತರೆ ನಮ್ಮನ್ನಾಲಿಸಿರಿ
ಕ್ರಿಸ್ತರೆ, ನಮ್ಮ ಪ್ರಾರ್ಥನೆಯನ್ನು ಚೆನ್ನಾಗಿ ಆಲಿಸಿರಿ

ಪರಲೋಕದ ಪಿತದೇವರೇ
ಇಹಲೋಕದ ಸಂರಕ್ಷಕರಾದ ದೇವಸುತನೇ
ಪವಿತ್ರಾತ್ಮ ದೇವರೇ,
ಪೂಜ್ಯ ಮರಿಯಮ್ಮನವರೇ,

ನಮಗೆ ದಯೆತೋರಿ

ಪೂಜ್ಯ ದೇವಮಾತೆಯೇ,
ಕನ್ನಿಕೆಯಲ್ಲಿ ಪೂಜ್ಯ ಕನ್ನಿಕೆಯೇ,
ಪಾದ್ವಾದ ಸಂತ ಅಂತೋನಿಯವರೇ
ಪ್ರೇಷಿತರಿಗಿಂತ ಧರ್ಮಭಿಮಾನವಿದ್ದ ಸಂತ ಅಂತೋನಿಯವರೇ
ಪ್ರವಾದಿಗಳ ಮನೋಭಾವಭರಿತರಾಗಿದ್ದ ಸಂತ ಅಂತೋನಿಯವರೇ
ಉನ್ನತ ಪಂಡಿತ ಎನಿಸಿಕೊಂಡ ಸಂತ ಅಂತೋನಿಯವರೇ
ಪೂಜ್ಯ ಧರ್ಮಸಭೆಯ ಬೆಳಕಾಗುವ ಸಂತ ಅಂತೋನಿಯವರೇ
ಕೃಪೆಯ ವಾಗ್ಮಿಯಾಗಿದ್ದ ಸಂತ ಅಂತೋನಿಯವರೇ,
ಸುಸಂದೇಶದ ಕಟ್ಟಳೆಯನ್ನು ಸಾರುವ ಕಹಳೆಯಂತಿದ್ದ
ಸಂತ ಅಂತೋನಿಯವರೇ,
ಅವಿರತ ಶಿಸ್ತಿನ ದರ್ಪಣವಾಗಿದ್ದ ಸಂತ ಅಂತೋನಿಯವರೇ
ತಪಶ್ಚರ್ಯೆಯ ಪವಾಡವೆನಿಸಿದ್ದ ಸಂತ ಅಂತೋನಿಯವರೇ,
ಉಜ್ವಲ ಪರಿಶುದ್ಧತೆಯ ಕಳವೆನಿಸಿದ್ದ ಸಂತ ಅಂತೋನಿಯವರೇ,
ಪ್ರಾಯಃಶ್ಚಿತದ ಆದರ್ಶವಾಗಿದ್ದ ಸಂತ ಅಂತೋನಿಯವರೇ,
ವಿಧೇಯತೆಯ  ಮಾದರಿಯಾಗಿದ್ದ ಸಂತ ಅಂತೋನಿಯವರೇ,

ನಮಗಾಗಿ ಪ್ರಾರ್ಥಿಸಿ

ಬಡತನವನ್ನು ಪ್ರೀತಿಸಿದವರಲ್ಲಿ ಸುಪ್ರಸಿದ್ಧರಾಗಿದ್ದ
ಸಂತ ಅಂತೋನಿಯವರೇ,
ವಿರಕ್ತತೆಯ ಲಿಲ್ಲಿ ಕುಸುಮದಂತಿದ್ದ ಸಂತ ಅಂತೋನಿಯವರೇ,
ತಾಳ್ಮೆಯ ಗುಲಾಬಿಯಂತಿದ್ದ ಸಂತ ಅಂತೋನಿಯವರೇ
ದೈನ್ಯತೆಯ ಮಂದಾರ ಹೂವಿನಂತಿದ್ದ ಸಂತ ಅಂತೋನಿಯವರೇ,
ಪರಿಶುದ್ಧತೆಯ ಮುತ್ತಿನಂತಿದ್ದ ಸಂತ ಅಂತೋನಿಯವರೇ,
ಅಧರ್ಮಿಗಳಿಗೆ ಬಡಿಗೋಲಿನಂತಿದ್ದ ಸಂತ ಅಂತೋನಿಯವರೇ,
ದೇವಾರಾಧನೆಯ ಅತ್ಯಾಶಕ್ತ ಧುರೀಣರಾಗಿದ್ದ ಸಂತ ಅಂತೋನಿಯವರೇ,
ಆತ್ಮಗಳ ಸಂರಕ್ಷಣೆಗಾಗಿ ಹಾತೊರೆಯುತ್ತಿದ್ದ ಸಂತ ಅಂತೋನಿಯವರೇ,
ರಕ್ತಸಾಕ್ಷಿಯಾಗಿ ಸಾಯುವ ಅತ್ಯಾಕಾಂಕ್ಷೆ ಹೊಂದಿದ್ದ
ಸಂತ ಅಂತೋನಿಯವರೇ,
ಯೆಸುವಿನ ಪ್ರೇಮಿ ಮತ್ತು ನಿತ್ಯ ಅನುಯಾಯಿಯಾಗಿದ್ದ
ಸಂತ ಅಂತೋನಿಯವರೇ,
ದೇವಮಾತೆಯ ಅತ್ಯಂತ ಶ್ರದ್ಧೆಯುಳ್ಳ ಭಕ್ತನಾಗಿದ್ದ
ಸಂತ ಅಂತೋನಿಯವರೇ,

**ನಮಗಾಗಿ ಪ್ರಾರ್ಥಿಸಿರಿ**

ನಿಮ್ಮನ್ನು ನಂಬಿದವರನ್ನು ಸಂರಕ್ಷಿಸುವ ಸಂತ ಅಂತೋನಿಯವರೇ,
ಕಳೆದುಹೋದ ವಸ್ತುಗಳನ್ನು ಮರಳಿ ಗಳಿಸಿಕೊಡುವ ಸಂತ ಅಂತೋನಿಯವರೇ,
ದೀನದಲಿತರನ್ನು ಪಾಲಿಸುವ ಸಂತ ಅಂತೋನಿಯವರೇ,

ಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ,
**ನಮ್ಮನ್ನು ಕ್ಷಮಿಸಿರಿ ಸ್ವಾಮಿ**
ಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ
**ನಮ್ಮ ಪ್ರಾರ್ಥನೆಯನ್ನು ಆಲಿಸಿರಿ ಸ್ವಾಮಿ**
ಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ
**ನಮಗೆ ದಯೆ ತೋರಿ ಸ್ವಾಮಿ**

ಒಬ್ಬರು : ಪ್ರಭು ಕ್ರಿಸ್ತರ ವಾಗ್ದಾನಗಳಿಗೆ ನಾವು ಪಾತ್ರರಾಗುವಂತೆ,

ಎಲ್ಲರೂ : ಪಕಲದ ಮಹಾಸಂತ ಅಂತೋನಿಯವರೇ, ನಮಗಾಗಿ ಪ್ರಾರ್ಥಿಸಿರಿ

ಪ್ರಾರ್ಥಿಸೋಣ : ಸರ್ವಶಕ್ತ ದೇವರೇ, ನಮ್ಮ ಪ್ರೀತಿಯ ಸಂತರಾದ ಅಂತೋನಿಯವರನ್ನು ಸದ್ಗುಣಗಳಿಂದ ಮತ್ತು ಅದ್ಭುತಗಳನ್ನು ಮಾಡುವ ವರಗಳಿಂದ ಅಲಂಕರಿಸುವಿರಿ. ನಮಗಾಗಿ ಅವರು ವಿನಂತಿಸುವ ಪ್ರಾರ್ಥನೆಗಳನ್ನು ಈಡೇರಿಸಿರಿ. ಆಮೆನ್

## 6. ಸಂತ ಅಂತೋನಿಯವರ ಸರಣಿ ಜಪ:

(ಪ್ರತಿಯೊಂದು ಜಪದ ಆನಂತರ ಒಂದು ಪರಲೋಕದಲ್ಲಿರುವ ತಂದೆಯೇ, ನಮೋ ಮರಿಯಾ, ಪಿತನಿಗೂ ಇತ್ಯಾದಿ ಪ್ರಾರ್ಥನೆಗಳನ್ನು ಹೇಳುವುದು)

**ಸಾವು :** ಓ ಸಂತ ಅಂತೋನಿಯವರೇ, ಸತ್ತವರನ್ನು ನೀವು ಸಜೀವಗೊಳಿಸಿದಿರಿ. ಮರಣಾವಸ್ಥೆಯಲ್ಲಿರುವವರಿಗಾಗಿಯೂ, ಮೃತಪಟ್ಟ ವಿಶ್ವಾಸಿಗಳಿಗಾಗಿಯೂ, ಪ್ರಾರ್ಥಿಸಿರಿ.

**ದೋಷ:** ಓ ಸಂತ ಅಂತೋನಿಯವರೇ, ಸಕಲ ದೋಷಗಳಿಂದ ನಮ್ಮನ್ನು ಕಾಪಾಡಿ. ಪೂಜ್ಯ ವಿಶ್ವಗುರು ಪೋಪಿಗಾಗಿಯೂ ಧರ್ಮಸಭೆಗಾಗಿಯೂ ಪ್ರಾರ್ಥಿಸಿರಿ.

**ಆಪತ್ತುಗಳು:** ಓ ಸಂತ ಅಂತೋನಿಯವರೇ, ನಮ್ಮ ಪಾಪಗಳ ನಿಮಿತ್ತ ನಮಗೆ ಸಂಭವಿಸಬಹುದಾದ ಸಕಲ ಆಪತ್ತುಗಳಿಂದ ನಮ್ಮನ್ನು ರಕ್ಷಿಸಿರಿ.

**ರೋಗಗಳು:** ಓ ಸಂತ ಅಂತೋನಿಯವರೇ, ನಮ್ಮ ಆತ್ಮಗಳನ್ನು ಸಮಸ್ತ ದುರಾಶೆ ಪಾಶಗಳಿಂದಲೂ ನಮ್ಮ ದೇಹಗಳನ್ನು ದೌರ್ಬಲ್ಯಗಳಿಂದಲೂ ರಕ್ಷಿಸಿರಿ.

**ಪಿಶಾಚಿಗಳ ಪಲಾಯನ :** ಓ ಸಂತ ಅಂತೋನಿಯವರೇ, ಪಿಶಾಚಿಗಳ ದುಷ್ಕ್ರಿಯೆಗಳಿಂದ ನರಳುತ್ತಿರುವ ನಮ್ಮನ್ನು ಕಾಪಾಡಿರಿ.

**ರೋಗಿಗಳ ಆರೋಗ್ಯ:** ಓ ಸಂತ ಅಂತೋನಿಯವರೇ, ದೇಹಾತ್ಮಗಳ ವ್ಯಾಧಿಗಳಿಂದ ನರಳುತ್ತಿರುವ ನಮ್ಮನ್ನು ಗುಣಪಡಿಸಿರಿ.

**ಸೌಮ್ಯಗೊಂಡ ಸಾಗರ:** ಓ ಸಂತ ಅಂತೋನಿಯವರೇ, ಪ್ರಯಾಣ ಮಾಡುವವರೆಲ್ಲರನ್ನೂ ಕಾಪಾಡಿ, ಅವರು ತಮ್ಮ ನಿವಾಸಗಳನ್ನು ಸುರಕ್ಷಿತವಾಗಿ ಸೇರುವಂತೆ ಕರುಣಿಸಿರಿ. ನಮ್ಮ ಆಶಾಪಾಶಗಳೆಂಬ ಬಿರುಗಾಳಿಗಳಿಂದ ನಮ್ಮನ್ನು ಸಂರಕ್ಷಿಸಿರಿ.

**ಮುರಿದ ಸಂಕೋಲೆಗಳು:** ಓ ಸಂತ ಅಂತೋನಿಯುವರೇ, ಸೆರೆಮನೆವಾಸಿಗಳಿಗಾಗಿ ಪ್ರಾರ್ಥಿಸಿರಿ. ನಮ್ಮನ್ನು ಪಾಪದ ದಾಸ್ಯತ್ವದಿಂದ ಸಂರಕ್ಷಿಸಿರಿ.

**ನಿರ್ಜೀವ ಅಂಗಾಂಗಳು :** ಓ ಸಂತ ಅಂತೋನಿಯವರೇ, ನಾವು ಕರ್ತರನ್ನು ಪರಿಶುದ್ಧ ದೇಹಾತ್ಮದವರಾಗಿದ್ದು ಸೇವಿಸುವಂತೆ ನಮ್ಮನ್ನು ಸಮಸ್ತ ವಿಘ್ನಗಳಿಂದಲೂ ಕೊರತೆಗಳಿಂದಲೂ ಸಂರಕ್ಷಿಸಿರಿ.

**ಕಳೆದು ಹೋದ ವಸ್ತುಗಳು :** ಕಳೆದು ಹೋದ ವಸ್ತುಗಳು ಮರಳಿ ಸಿಗುವಂತೆ ಮಾಡುವವರೇ, ನಾವು ದೇಹಾತ್ಮಗಳ ವರಗಳನ್ನು ಕಳೆದುಕೊಂಡಿದ್ದರೆ, ಅವುಗಳನ್ನು ನಮಗೆ ಪುನಃ ದಯಪಾಲಿಸಿರಿ.

**ಪ್ರಾರ್ಥನೆ ಆಪತ್ತುಗಳ ಪರಿಹಾರ:** ಓ ಸಂತ ಅಂತೋನಿಯವರೇ, ದೇಹಾತ್ಮದ ಸಕಲ ಆಪತ್ತುಗಳಿಂದ ನಮ್ಮನ್ನು ಕಾಪಾಡಿರಿ.

**ವಿಷಮ ಸನ್ನಿವೇಶದ ಪರಿಹಾರ:** ಓ ಸಂತ ಅಂತೋನಿಯವರೇ, ದೀನರ ಬಂಧುವೇ, ನಮ್ಮ ಅವಶ್ಯಕತೆಗಳಿಗನುಸಾರವಾಗಿ ನಮಗೆ ಸಹಾಯ ನೀಡಿರಿ.

**ನಿರುದ್ಯೋಗಿಗಳಿಗೆ :** ಓ ಸಂತ ಅಂತೋನಿಯವರೇ, ನಿರುದ್ಯೋಗಿಗಳಿಗೆ

ಉದ್ಯೋಗವನ್ನು ಅನ್ನವನ್ನು ದಯಪಾಲಿಸಿರಿ.

**ನಿಮ್ಮ ಪ್ರಭಾವ ಹಬ್ಬಲಿ:** ಓ ಸಂತ ಅಂತೋನಿಯವರೇ, ನಿಮಗೆ ಲಭಿಸಿದ ಸಕಲ ವರಗಳಿಗಾಗಿ ನಾವು ಪ್ರಭುವಿಗೆ ಕ್ರತಜ್ಞತಾ ಸ್ತೋತ್ರಗಳನ್ನು ಸಲ್ಲಿಸುತ್ತೇವೆ ಮತ್ತು ಜೀವನ ಹಾಗೂ ಮರಣದಲ್ಲಿ ನಿಮ್ಮ ಸಹಾಯವನ್ನು ಬೇಡಿಕೊಳ್ಳುತ್ತೇವೆ.

## 7. ಸಂತ ಅಂತೋನಿಯವರಿಗೆ ಹದಿಮೂರು ನಮನ ಸ್ತೋತ್ರಗಳು

(ಪ್ರತಿಯೊಂದು ಸ್ತೋತ್ರದ ತರುವಾಯ ಒಂದು ಪರಲೋಕ , ನಮೋ ಮರಿಯಾ, ಪಿತನಿಗೂ ಇತ್ಯಾದಿ ಪ್ರಾರ್ಥನೆಗಳನ್ನು ಹೇಳುವುದು)

1. ಓ ಸಂತ ಅಂತೋನಿಯವರೆ ಮಾತೆ ಮರಿಯಳ ಅನುಗ್ರಹದಿಂದ ನೀವು ಜನಿಸಿದಿರಿ. ನೀವು ಐದು ವರ್ಷದ ಬಾಲಕನಾಗಿರುವಾಗಲೇ ಅವರಿಗೆ ನಿಮ್ಮ ಬ್ರಹ್ಮಚರ್ಯವನ್ನು ಸಮರ್ಪಿಸಿದಿರಿ. ಶಿಲುಬೆಯ ಗುರುತಿನ ಮೂಲಕ ಪಿಶಾಚಿಯನ್ನು ಪಲಾಯನಗೊಳಿಸಿದಿರಿ. ನಾವು ಸಹಾ ಪೂಜ್ಯ ಮಾತೆಯಲ್ಲಿ ಮಮತೆಯ ಭಕ್ತಿಯನ್ನಿಡುವಂತೆ ಕರುಣಿಸಿರಿ. ನಮ್ಮ ಅಂತರಂಗದ ವೈರಿಯ ಸರ್ವದಾ ಕೃತ್ಯಗಳನ್ನು ಎದುರಿಸುವ ಶಕ್ತಿ ನಮಗೆ ಕೊಡಿರಿ.

2. ಓ ಮಹಿಮಾಭರಿತ ಸಂತ ಅಂತೋನಿಯವರೇ, ಈ ಜಗತ್ತಿನ ಅಪಾಯ ಮತ್ತು ದುಷ್ಪ್ರೇರಣೆಗಳಿಂದ ದೂರವಿರಲು ಸಂತ ಅಗಸ್ತೀನರ ಮಠದ ಸದಸ್ಯರಾದಿರಿ, ಈ ಲೋಕದ ಗೌರವ, ಸೌಭಾಗ್ಯ ಮತ್ತು ಶ್ರೀಮಂತಿಕೆಗಳನ್ನು ತ್ಯಜಿಸಿದಿರಿ. ನಮ್ಮಲ್ಲಿಯೂ ಈ ಲೋಕದ ನೈಜ ತಿರಸ್ಕಾರ ಉಂಟಾಗುವಂತೆ ಮಾಡಿರಿ.

3. ಓ ಮಹಿಮಾಭರಿತ ಸಂತ ಅಂತೋನಿಯವರೇ ರಕ್ತಸಾಕ್ಷಿಯಾಗಿ ಮಡಿಯುವ ಮಹತ್ವಾಕಾಂಕ್ಷೆಯಿಂದ ಸಂತ ಫ್ರಾನ್ಸಿಸರ ಮಠವನ್ನು

ಸೇರಿದಿರಿ. ನಮ್ಮಲ್ಲಿ ಪ್ರಾಯಶ್ಚಿತ ಮತ್ತು ಸ್ವ–ದಂಡನೀಯ ಮನೋಭಾವ ಮೂಡುವಂತೆ ಕರುಣಿಸಿರಿ.

4. ಓ ಮಹಿಮಾಭರಿತ ಸಂತ ಅಂತೋನಿಯವರೇ ದೈನ್ಯತೆಯ ಮನೋಭಾವವನ್ನು ಹೊಂದಿದ ನೀವು, ಜಗತ್ತಿಗೆ ಪ್ರಸಿದ್ಧವಾಗದಿರಲು ಸರ್ವ ಪ್ರಯತ್ನ ಮಾಡಿದಿರಿ. ಆದರೆ ದೇವರು ನಿಮ್ಮನ್ನು ನಿಮ್ಮ ಜ್ಞಾನ ಮತ್ತು ಪವಿತ್ರತೆಯನ್ನು ಜಗತ್ತಿಗೆ ತಿಳಿಯ ಪಡಿಸಿ ನಿಮ್ಮ ಕೀರ್ತಿಯನ್ನು ಸಾರಿದರು. ದೈನ್ಯತೆಯ ಸದ್ಗುಣವನ್ನು ಆಚರಿಸುವ ಕೃಪೆಯನ್ನು ನಮಗೆ ಒದಗಿಸಿ ಕೊಡಿರಿ.

5. ಓ ಮಹಿಮಾಭರಿತ ಸಂತ ಅಂತೋನಿಯವರೇ, ಭಗವಂತನ ಸಂದೇಶವನ್ನು ಸಾರುವುದಕ್ಕೆ ನೀವು ತೀರ್ಮಾನಿಸಿದಿರಿ. ಅದರಿಂದಲೇ ಬಹು ಭಾಷಾ ವರವನ್ನು ಪಡೆದಿರಿ. ಅತ್ಯದ್ಭುತ ಪವಾಡಗಳನ್ನು ಮಾಡುವ ವರವು ನಿಮಗೆ ಲಭಿಸಿತು. ದೇವರ ಸಂದೇಶವನ್ನು ನಾವು ಮನವರಿತು ಫಲವತ್ತಾಗಿ ಕೇಳುವಂತಹ ಸೌಭಾಗ್ಯವನ್ನು ನಮಗೆ ಕರುಣಿಸಿರಿ.

6. ಓ ಮಹಿಮಾಭರಿತ ಸಂತ ಅಂತೋನಿಯವರೇ, ದೇವರಲ್ಲಿ ಅನುಪಮ ಪ್ರೀತಿಯನ್ನು ಹೊಂದಿದ ನಿಮ್ಮ ತೋಳುಗಳಲ್ಲಿ ಬಾಲ ಯೇಸುವು ಬಂದು ವಿಶ್ರಮಿಸಿದರು. ಅವರನ್ನು ನಾವು ಪರಮಪ್ರಸಾದದ ಮೂಲಕ ಪ್ರೀತಿ ಮತ್ತು ಆಸಕ್ತಿಯಿಂದ ಸ್ವೀಕರಿಸುವ ಸೌಭಾಗ್ಯವನ್ನು ನಮಗೆ ಕರುಣಿಸಿರಿ.

7. ಓ ಮಹಿಮಾಭರಿತ ಸಂತ ಅಂತೋನಿಯವರೇ ಮೂಕಪ್ರಾಣಿಯೊಂದನ್ನು ಪರಮಪ್ರಸಾದದ ಸನ್ನಿಧಿಯಲ್ಲಿ ಮಣಿದು ಆರಾಧಿಸುವಂತೆ ಅದನ್ನು ಪ್ರೇರೇಪಿಸಿ ಅವಿಶ್ವಾಸಿಗಳಿಗೆ ಬಗ್ಗುಬಡಿದಿರಿ. ನಾವು ಪರಮಪ್ರಸಾದದಲ್ಲಿ ಯೇಸುವನ್ನು ಉತ್ಸಾಹಪೂರ್ಣ ವಿಶ್ವಾಸದಿಂದ ಆರಾಧಿಸುವಂತೆ ಕರುಣಿಸಿರಿ.

8. ಓ ಮಹಿಮಾಭರಿತ ಸಂತ ಅಂತೋನಿಯವರೇ, ಜನರು ದೇವರ ಸಂದೇಶವನ್ನು ಬಂದು ಕೇಳಲು ನಿರಾಕರಿಸಿದಾಗ ಸಾಗರದ ಮೀನುಗಳನ್ನು

ಸ್ವಾಗತಿಸಿ ಅವುಗಳಿಗೆ ಧರ್ಮೋಪದೇಶ ಮಾಡಿದಿರಿ. ನಮ್ಮ ಹೃನ್ಮನಗಳು ದೈವಿಕ ಸತ್ಯಗಳಿಗೆ ಪೂರ್ಣವಿಧೇಯರಾಗುವಂತೆ ಕೃಪೆಯನ್ನು ಕರುಣಿಸಿರಿ.

9. ಓ ಮಹಿಮಾಭರಿತ ಸಂತ ಅಂತೋನಿಯವರೇ, ವಿಶ್ವಾಸಿಗಳ ಸಂರಕ್ಷಕರಿಂದ ನೀವು ಹಸುಗೂಸನ್ನು ಮಾತಾಡುವಂತೆ ಮಾಡಿ, ಅದರ ತಾಯಿಯ ಮನವನ್ನು ಕಾಪಾಡಿದಿರಿ. ಈ ಲೋಕದ ಶೋಧನೆಗಳ ಮಧ್ಯೆಯು ನಾವು ಶಕ್ತರಾಗಿದ್ದು, ನಮ್ಮ ಪರಿಶುದ್ಧತೆಯನ್ನು ಸಂಪೂರ್ಣವಾಗಿ ಕಾಪಾಡಿಕೊಳ್ಳುವ ಕೃಪಾವರವನ್ನು ನಮಗೆ ಕರುಣಿಸಿ.

10. ಓ ಮಹಿಮಾಭರಿತ ಸಂತ ಅಂತೋನಿಯವರೇ, ಪಾದ್ವಾ ದೇಶದಲ್ಲಿ ಧರ್ಮ ವ್ಯಾಖ್ಯಾನ ಮಾದುತ್ತಿರುವಂತೆ ಅತ್ಯದ್ಭುತ ರೀತಿಯಲ್ಲಿ ಲಿಸ್ಬನ್ ನಗರದಲ್ಲಿ ಕಾಣಿಸಿಕೊಂಡು ನಿಮ್ಮ ತಂದೆಯವರನ್ನು ಮಿಥ್ಯಾಪವಾದ ಮತ್ತು ಸಾವಿನಿಂದ ಕಾಪಾಡಿದಿರಿ. ನಮ್ಮ ವೈರಿಗಳು ನಮಗೆ ಮಾಡಿದ ಸರ್ವ ಅಪರಾಧಗಳನ್ನು ನಾವು ಮನಃಪೂರ್ವಕವಾಗಿ ಕ್ಷಮಿಸಿ, ಅವರನ್ನು ಪ್ರೀತಿಸುವ ಕೃಪಾವರವನ್ನು ನಮಗೆ ಕರುಣಿಸಿ.

11. ಓ ಮಹಿಮಾಭರಿತ ಸಂತ ಅಂತೋನಿಯವರೇ, ನಿಮ್ಮ ಪ್ರಾರ್ಥನೆ, ಆಸಕ್ತಿ ಮತ್ತು ಲೋಕಾತೀತ ಜಾಣ್ಮೆಯಿಂದ ಸಾವಿರಾರು ಅವಿಶ್ವಾಸಿಗಳನ್ನು ಮತ್ತು ಕಲ್ಲೆದೆಯ ಪಾಪಿಗಳನ್ನು ಮತಾಂತರಗೊಳಿಸಿದಿರಿ. ನಮ್ಮಲ್ಲಿ ಸಹ ನಿಜವಾದ ಹೃದಯ ಪರಿಪೂರ್ಣವಾಗಿ ಸಮರ್ಪಿಸುವ ಕೃಪಾವರವು ನೆಲೆಸುವಂತೆ ನಮಗೆ ಕರುಣಿಸಿರಿ.

12. ಓ ಮಹಿಮಾಭರಿತ ಸಂತ ಅಂತೋನಿಯವರೇ, ದಿವ್ಯ ರಕ್ಷಕರನ್ನು ಅನುಸರಿಸುವುದಕ್ಕಾಗಿ ನಿಮ್ಮ ಇದೇ ಜೀವನವನ್ನು ಆತ್ಮಗಳ ಸಂರಕ್ಷಣೆಗಾಗಿ ವ್ಯಯ ಮಾಡಿದಿರಿ. ನೀವು ಕಡೇಉಸಿರೆಳೆದಾಗ ಯೇಸುವನ್ನು ಕಂಡಂತೆ ನಾವು ಸಹ ಕಾಣುವ ಶ್ರೇಷ್ಠ ಕೃಪಾವರವನ್ನು ನಿಮ್ಮೊಂದಿಗೆ ಅನಂತ ಜೀವನದಲ್ಲಿ ಸದಾ ಇರುವ ಸೌಭಾಗ್ಯವನ್ನು ನಮಗೆ ಕರುಣಿಸಿರಿ.

13. ಓ ಮಹಿಮಾಭರಿತ ಸಂತ ಅಂತೋನಿಯವರೇ, ನಿರಂತರವಾಗಿ

ಅದ್ಭುತಗಳನ್ನು ಮಾಡುವ ಶಕ್ತಿಯನ್ನು ದೇವರು ನಿಮಗೆ ಕರುಣಿಸಿದರು ನಿಮ್ಮಲ್ಲಿ ಮೊರೆ ಇಡುವವರ ಪ್ರಾರ್ಥನೆಗಳಿಗೆ ಓಗೊಡುತ್ತೀರಿ. ನಾವು ನಿಮ್ಮಲ್ಲಿ ಭಿನ್ನಹವು ನನ್ನ ಆತ್ಮಶ್ರೇಯಸ್ಸಿಗಾಗಿದ್ದ ಪಕ್ಷದಲ್ಲಿ ಮಾತೆ ಮರಿಯಳ ಮೂಲಕ ಯೇಸುವಿನಿಂದ ಅದನ್ನು ನಮಗೆ ಒದಗಿಸಿಕೊಡಿರಿ. ಆಮೇನ್

## 8. ಸಂತ ಅಂತೋನಿಯವರ ಪರಿಶುದ್ಧ ನಾಲಗೆಯ ಸ್ತುತಿ

ಪಾದ್ವಾಪತಿಯಾದ ಸಂತ ಅಂತೋನಿಯವರೇ ನೀವು ನಿಮ್ಮ ನಾಲಿಗೆಯ ಮೂಲಕ ಯಾವಾಗಲೂ ದೇವರನ್ನು ಸ್ತುತಿಸಿದರಲ್ಲದೆ ಪರರಿಂದಲೂ ಸಹಾ ಸ್ತುತಿಸಲ್ಪಡುವಂತೆ ಮಾಡಿದ್ದೀರಿ. ನಾವು ನಿಮ್ಮ ಪುಣ್ಯ ಮಾತೃಕೆಯನ್ನು ಕಂಡು ಭಾವಿಸುವುದಲ್ಲದೆ, ಯಾವುದೊಂದು ಪಾಪದಿಂದ ನಮ್ಮ ನಾಲಿಗೆಯ ಮೂಲಕ ದೇವರನ್ನು ಸ್ತುತಿಸಿ, ಅವರ ಪರರಿಂದಲೂ ಸ್ತುತಿಸಲ್ಪಡುವಂತೆ ಮಾಡುವೆವೆಂದು ವಾಗ್ದಾನ ಮಾಡುತ್ತೇನೆ. ನಾವು ನಾಲಿಗೆಯ ಮೂಲಕ ಕಟ್ಟಿಕೊಂಡ ಮತ್ತು ಪರರು ಕಟ್ಟಿಕೊಳ್ಳುವಂತೆ ಮಾಡಿದ ಮುಂದೆ ನಮ್ಮ ನಾಲಿಗೆಯ ಮೂಲಕ ಯಾವಾಗಲೂ ದೇವರನ್ನು ಸ್ತುತಿಸಿ, ಅವರು ಪರರಿಂದಲೂ ಸ್ತುತಿಸಲ್ಪಡುವಂತೆ ಮಾಡಲು ನಮಗೆ ಪ್ರತ್ಯೇಕ ವರಪ್ರಸಾದವನ್ನು ನಿಮ್ಮ ಪರಿಶುದ್ಧ ಕರಗಳಲ್ಲಿರುವ ಬಾಲ ಯೇಸುವಿನಿಂದ ಪಡೆದುಕೊಡುವಂತೆ ನಿಮ್ಮನ್ನು ಬೇಡಿಕೊಳ್ಳುತ್ತೇವೆ. ಯಾವಾಗಲೂ ಕರ್ತರನ್ನು ಸ್ತುತಿಸಿ, ಅವರಿದಿಂದಲೂ ಅವರು ಸ್ತುತಿಸಲ್ಪಡುವಂತೆ ಮಾಡಿದ ಪರಿಶುದ್ಧ ನಾಲಿಗೆಯೇ, ಅವರು ಸ್ತುತಿಸಲ್ಪಡುವಂತೆ ಮಾಡಿದ ಪರಿಶುದ್ಧ ನಾಲಿಗೆಯೇ, ಕರ್ತರ ಸನ್ನಿಧಾನದಲ್ಲಿ ನೀನು ಎಷ್ಟು ಕೃಪೆಯನ್ನು ಪಡೆದುಕೊಂಡಿದ್ದಿ ಎಂದು ಈಗ ತಿಳಿದಿದ್ದೇವೆ.

ಕ್ರಿಸ್ತರ ಪರಿಶುದ್ಧ ವಾಗ್ದಾನಗಳಿಗೆ ನಾವು ಪಾತ್ರರಾಗುವ ಹಾಗೆ ಸಂತ ಅಂತೋನಿಯವರೇ, ನಮಗಾಗಿ ಪ್ರಾರ್ಥಿಸಿರಿ.

**ಪ್ರಾರ್ಥಿಸೋಣ :** ಅದ್ಭುತಗಳನ್ನೂ ಅತಿಶಯಗಳನ್ನೂ ಮಾಡುವ ಸರ್ವಶಕ್ತರಾದ ದೇವರೇ, ನೀವು ನಿಮ್ಮ ಸೇವಕರಾದ ಸಂತ

ಅಂತೋನಿಯವರ ಪರಿಶುದ್ಧ ನಾಲಿಗೆಯನ್ನು ಅವರ ಮರಣದ ನಂತರ ನಶಿಸಿ ಹೋಗದಂತೆ ಕಾಪಾಡಿದಿರಿ. ಅವರ ಪುಣ್ಯಫಲಗಳ ಮೂಲಕ ನಾವು ನಿಮ್ಮನ್ನು ಸದಾ ಸ್ತುತಿಸುವಂತೆ ಮಾಡಿ ಕರುಣಿಸಿರಿ. ಈ ಕೋರಿಕೆಗಳನ್ನು ನಮ್ಮ ಕರ್ತರಾದ ಯೇಸು ಕ್ರಿಸ್ತರ ಮುಖಾಂತರ ನಮಗೆ ದಯಪಾಲಿಸಿ ಕರುಣಿಸಿ ಸ್ವಾಮಿ, ಆಮೆನ್.

## 9. ಕಳೆದುಹೋದ ವಸ್ತುಗಳನ್ನು ಮರಳಿ ಪಡೆಯಲು ವಿಶೇಷ ಪ್ರಾರ್ಥನೆ

ಓ ಶ್ರೇಷ್ಠ ಸಂತ ಅಂತೋನಿಯವರೇ, ಗುಣ ಸಂಪನ್ನರಾದ ದೂತರೇ, ಅದ್ಭುತಗಳನ್ನು ಗೈಯುವ ವರಗಳನ್ನೂ, ಕಳೆದುಹೋದ ವಸ್ತುಗಳನ್ನು ಮರಳಿ ದೊರಕಿಸಿಕೊಡುವ ವರವನ್ನು ದೇವರಿಂದ ಪಡೆದಿರುವಿರಿ. ಈ ಸನ್ನಿವೇಶದಲ್ಲಿ ನನ್ನ ಸಹಾಯಕ್ಕೆ ದಯಮಾಡಿರಿ. ನಿಮ್ಮ ಸಹಾಯದಿಂದ ನಾನು ಬಯಸುವ ವರವು ನನಗೆ ಲಭಿಸಲಿ ಹಾಗೂ ನಾನು ಕಳೆದುಕೊಂಡ ವಸ್ತುವನ್ನು ಮರಳಿ ಪಡೆಯುವಂತೆ ಕರುಣಿಸಿ. ಈ ಪ್ರಯುಕ್ತ, ನಿಮ್ಮ ಮೂಲಕ ಅದ್ಭುತ ಕಾರ್ಯಗಳನ್ನು ಮಾಡುವ ಪರಮಾತ್ಮನನ್ನು ನಾನು ಮಹಿಮೆ ಪಡಿಸುವಂತಾಗಲಿ, ಆಮೆನ್.

## 10. ಸಂತ ಅಂತೋನಿಯವರ ತೋಳ್ಬಂಧನದಲ್ಲಿರುವ ಬಾಲ ಯೇಸುವಿಗೆ ಪ್ರಾರ್ಥನೆ

ಓ ಕರುಣಾಳು ಯೇಸುವೆ, ನನ್ನ ಆತ್ಮದ ಏಕೈಕ ಹಾಗೂ ಸುಭದ್ರ ಆಸರೆ ನೀವು. ನಿಮ್ಮ ಚರಣಾರವಿಂದಕ್ಕೆ ನಾನು ಮಣಿಯುತ್ತೇನೆ. ನಿಮ್ಮ ಸಂತ ಅಂತೋನಿಯವರ ಹೃದಯದಲ್ಲಿದ್ದ ಅಪ್ರತಿಮ ಪ್ರೇಮದ ಮೂಲಕ, ಹಾಗೂ ನೀವು ಬಾಲರ ರೂಪದಲ್ಲಿ ಅವರಿಗೆ ಪ್ರತ್ಯಕ್ಷರಾಗಿ, ಅವರನ್ನು ಸಂತೈಸಿ ಹಾಗೂ ಅರಸಿ, ಅವರಲ್ಲಿ ನೀವು ತೋರಿಸಿದ ಪ್ರೇಮದ ಮೂಲಕ ನಾನು ನಿಮ್ಮಲ್ಲಿ ವಿನಯದಿಂದ ಪ್ರಾರ್ಥಿಸುತ್ತೇನೆ.


ನನ್ನ ಮಹಾ ಅವಶ್ಯಕತೆಯಲ್ಲಿ ಮತ್ತು ಆತಂಕದಲ್ಲಿ, ನನ್ನಾತ್ಮಕ್ಕೆ ದಯಮಾಡಿ ನನಗೆ ನೆಮ್ಮದಿಯನ್ನು ನೀಡಿ. ನಿಮ್ಮನ್ನು ನಾನು ನಂಬಿದ್ದೇನೆ. ನಿಮ್ಮಲ್ಲೇ ನನ್ನ ಭರವಸೆಯನ್ನಿಟ್ಟಿದ್ದೇನೆ. ಆಮೆನ್.







daijiworld.com




ಸಂತ ಅಂತೋನಿಯವರ ಪುಣ್ಯಕ್ಷೇತ್ರ
ಪಕಲ
ಮಂಜರಪಲ್ಕೆ


# ಉಗ್ಡಾಸಾಕ್



# ಲುವಿಸ್ ಅಗೇರಾ

ಜನನ್ : 03-09-1945    ಮರಣ್ : 30-06-2020

ಆಳ್ವಾಲಾ ಘರ್ಚೊ ಮಾಲ್ಘಡೊ ಸಾಂದೊ
ಲಕೊನ್ ಪಡ್ಲ್ಲಾ ಘರ್ಚೊ ಕುಂದೊ
ಚಿಂತಿನಾಸ್ತಾ ತುಕಾ ಆಮ್ಚೆ ಥಾವ್ನ್ ಪಯ್ಸ್ ಕೆಲೆಂ
ದೆವಾನ್ ಸಂಸಾರಿಂ ಬರೆಂ ಪಾರ್ಕಿಲೆಂ

ಕಾಕುತಿಚ್ಯಾ ಬಾಪಾ, ಲಾಭಯ್ ಕುಪಾ್ರ
ಪಾತ್ಕಾಂ ಸರ್ವ್ ಭೊಗ್ಸುನ್ ದೀ ಸುಟ್ಕಾ
ಶಾಂತಿ ಆನಿ ಸಮಾಧಾನ್ ಪಾಟವ್ನ್
ಪಾವಯ್ ಸಾಸಾಣ್ ಸುಖಾಕ್ ಸರ್ಗಾರ್

## ಅಗೇರಾ ಕುಟಾಮ್

## ಪಕಲ, ಬೆಳ್ಮಣ್